ವಿಜಯಪುರ | ಸಂಪುಟ 02 | ಸಂಚಿಕೆ 129 | ಪುಟ 4 | ₹ 3.00

https://udayarashminews.com

udayarashmi 90088 88340

# ಉದಯರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ    Editor: Indushekhar Manur

editor.udayarashmi@gmail.com    RNI NO: KARKAN/2023/86203    ಶುಕ್ರವಾರ, ಜುಲೈ 12, 2024



“ಮಕ್ಕಳ ಮಾನಸಿಕ, ದೈಹಿಕ, ಆರೋಗ್ಯ ರಕ್ಷಣೆ, ಪೋಷಣೆ, ಶಿಕ್ಷಣ ಮತ್ತು ಹಕ್ಕುಗಳ ಸಂರಕ್ಷಣೆ ಕುರಿತು ವಿಶೇಷ ಗಮನ ಹರಿಸುವುದು ನಮ್ಮೆಲ್ಲರ ಕರ್ತವ್ಯ. ಮಕ್ಕಳ ಕಲ್ಯಾಣ–ಕ್ಕಾಗಿ ವಿವಿಧ ತರಬೇತಿ ಕಾರ್ಯಾಗಾರಗಳನ್ನು ರೂಪಿಸುವ & ಅನುಷ್ಠಾನಕ್ಕೆ ತರುವ ಹೊಣೆ ನನ್ನದು.”

– ಸಂಗಮೇಶ ಬಬಲೇಶ್ವರ
ಅಧ್ಯಕ್ಷರು, ಕರ್ನಾಟಕ ಬಾಲವಿಕಾಸ ಅಕಾಡೆಮಿ

## ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಳ್ಳಲು ಸಿಜೆಐಗೆ ಶಾಸಕ ಬಸನಗೌಡ ಪಾಟೀಲ (ಯತ್ನಾಳ) ಪತ್ರ

# ಮುಡಾ ಹಗರಣ: ಹೈಕೋರ್ಟ್ ಪ್ರಕರಣ ದಾಖಲಿಸಿಕೊಳ್ಳಲಿ!

**ಉದಯರಶ್ಮಿ ನ್ಯೂಸ್**

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಲ್ಲಿ ನಡೆದಿರುವ ಪರ್ಯಾಯ ಪ್ಲಾಟ್ ಹಗರಣದ ಕುರಿತು ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಳ್ಳಬೇಕು ಎಂದು ಬಿಜೆಪಿ ಹಿರಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್‌ವಿ ಅಂಜರಿಯಾ ಅವರಿಗೆ ಪತ್ರ ಬರೆದಿದ್ದಾರೆ.

ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಫಲಾನುಭವಿಯಾಗಿದ್ದು, ಪ್ರಕರಣವನ್ನು ಕೇಂದ್ರೀಯ ತನಿಖಾ ಸಂಸ್ಥೆಗೆ ಹಸ್ತಾಂತ–ರಿಸಲು ಹಗರಣದ ಕಾನೂನು ಪ್ರಕ್ರಿಯೆಗಳನ್ನು ಪ್ರಾರಂಭಿಸುವಂತೆ ಬಿಜೆಪಿ ಶಾಸಕರು ಮನವಿ ಮಾಡಿದ್ದಾರೆ.

ನಿಷ್ಪಕ್ಷಪಾತ ಮತ್ತು ಸಮಗ್ರತೆಯನ್ನು ಖಚಿತಪಡಿಸಿಕೊಳ್ಳಲು ಗೌರವಾನ್ವಿತ ಉಚ್ಚ ನ್ಯಾಯಾಲಯ ಪ್ರಕರಣದ ತನಿಖೆಯ ಮೇಲ್ವಿಚಾರಣೆ ವಹಿಸಿಕೊಳ್ಳಬೇಕು ಎಂದು ವಿನಂತಿಸುತ್ತೇನೆ. ನಿಮ್ಮ ಮಾರ್ಗದರ್ಶನದಲ್ಲಿ ನ್ಯಾಯವು ಮೇಲುಗೈ ಸಾಧಿಸುತ್ತದೆ ಮತ್ತು ನಾಗರಿಕರ ಹಕ್ಕುಗಳನ್ನು ಎತ್ತಿಹಿಡಿಯುತ್ತದೆ ಎಂದು ನನಗೆ ವಿಶ್ವಾಸವಿದೆ ಎಂದು ಯತ್ನಾಳ್ ಹೇಳಿದ್ದಾರೆ.

ಮೈಸೂರು ನಗರದ ವಿಜಯನಗರದ ಮೂರು ಮತ್ತು ನಾಲ್ಕನೇ ಹಂತಗಳಲ್ಲಿ ಪ್ರಮುಖ ಆಸ್ತಿ ಸೇರಿದಂತೆ 3,000ಕ್ಕೂ ಹೆಚ್ಚು ನಿವೇಶನಗಳನ್ನು(ಸೈಟ್‌ಗಳು) ಅಕ್ರಮವಾಗಿ ಹಂಚಿಕೆ ಮಾಡಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ವಿಜಯನಗರ



ಮೂರನೇ ಹಂತದಲ್ಲಿ 50ಥ80 ಅಡಿಯ 5 ಮತ್ತು 60ಥ40 ಅಡಿ ವಿಸ್ತೀರ್ಣದ 2 ನಿವೇಶನಗಳು ಹಾಗೂ 60ಥ40 ಅಡಿ ವಿಸ್ತೀರ್ಣದ ಐದು ನಿವೇಶನಗಳು ಸೇರಿ 14 ನಿವೇಶನಗಳನ್ನು ಅಕ್ರಮವಾಗಿ ಮಂಜೂರು ಮಾಡಿರುವುದು ಬೆಳಕಿಗೆ ಬಂದಿದೆ ಎಂದು ವಿಜಯಪುರ ಬಿಜೆಪಿ ಶಾಸಕರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಸಿದ್ದರಾಮಯ್ಯ ಸಂಪುಟದ ಸಚಿವರೊಬ್ಬರು ಮುಡಾದಲಿದ್ದ ಸಂಬಂಧಿಸಿದ ಎಲ್ಲಾ ಕಡತಗಳನ್ನು ಬೆಂಗಳೂರಿಗೆ ಕೊಂಡೊಯ್ದಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿದ್ದು, ಇದು ಭ್ರಷ್ಟಾಚಾರವನ್ನು ಮುಚ್ಚಿಹಾಕುವ ಪ್ರಯತ್ನವಾಗಿದೆ ಎಂದು ತೋರುತ್ತದೆ.

50:50 ಹಂಚಿಕೆ ಪರಿಹಾರ ಯೋಜನೆಯನ್ನು ರದ್ದುಗೊಳಿಸಿದ 27.10.2023 ರ ಸರ್ಕಾರದ ಅಧಿಸೂಚನೆಯ ಹೊರತಾಗಿಯೂ, ಮೈಸೂರಿನ ವಿಜಯನಗರ 3ನೇ ಹಂತ, ಇ ಬ್ಲಾಕ್ ಮತ್ತು ವಿಜಯನಗರ 4ನೇ ಹಂತದಲ್ಲಿರುವ ಈ ಬೆಲೆಬಾಳುವ ನಿವೇಶನಗಳನ್ನು ಮುಖ್ಯಮಂತ್ರಿಯವರ ಪತ್ನಿಗೆ ಮಂಜೂರು ಮಾಡುವಂತೆ ಅಧಿಕಾರಿಗಳ ಮೇಲೆ ಒತ್ತಡ ಹೇರಲಾಗಿದೆ ಎಂದು ಯತ್ನಾಳ್ ಆರೋಪಿಸಿದ್ದಾರೆ.

## ಆಲಮಟ್ಟಿ: 3500 ಕ್ಯುಸೆಕ್ಸ್ ಹೊರಹರಿವು :
## ವಿದ್ಯುತ್ ಉತ್ಪಾದನೆ ಆರಂಭ

**ಉದಯರಶ್ಮಿ ನ್ಯೂಸ್**

ಆಲಮಟ್ಟಿ: ಜಲಾಶಯಕ್ಕೆ ಭಾರಿ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ಗುರುವಾರ ಮಧ್ಯಾಹ್ನದಿಂದ 3500 ಕ್ಯುಸೆಕ್ ನೀರನ್ನು ಹೊರಬಿಡಲಾಗುತ್ತಿದೆ.

ಈ ನೀರನ್ನು ಜಲಾಶಯದ ಬಲಭಾಗದ ವಿದ್ಯುತ್ ಉತ್ಪಾದನಾ ಘಟಕದ ಮೂಲಕ ವಿದ್ಯುತ್ ಉತ್ಪಾದನೆ ಆರಂಭಗೊಂಡಿದೆ.

ಕಳೆದ ಕೆಲ ತಿಂಗಳಿಂದ ಹೊರಹರಿವು ಸ್ಥಗಿತವಾಗಿದ್ದರಿಂದ ವಿದ್ಯುತ್ ಉತ್ಪಾದನಾ ಘಟಕ ಬಂದಾಗಿತ್ತು.

ಗುರುವಾರ 55 ಮೆಗಾವಾಟ್ ಸಾಮರ್ಥ್ಯದ ಒಂದು ಘಟಕ ಕಾರ್ಯನಿರ್ವಹಿಸುತ್ತಿದ್ದು, ಅದರಿಂದ 25 ಮೆಗಾವಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ.

ಗುರುವಾರ 69,482 ಕ್ಯುಸೆಕ್ ಇದ್ದ ಒಳಹರಿವು ಸಂಜೆ ವೇಳೆಗೆ ಕಡಿಮೆಯಾಗಿದೆ. ನಾರಾಯಣಪುರ ಜಲಾಶಯ ಭರ್ತಿಗಾಗಿ ಇಲ್ಲಿಂದ ನೀರು ಬಿಡಲಾಗುತ್ತಿದೆ.

ಸದ್ಯ ಆಲಮಟ್ಟಿ ಜಲಾಶಯದಲ್ಲಿ 84 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ.

ಮುಂಜಾಗ್ರತೆಯ ಕ್ರಮವಾಗಿ ಜಲಾಶಯ ಭರ್ತಿಗೂ ಮುನ್ನವೇ ಆಲಮಟ್ಟಿ ಜಲಾಶಯದಿಂದ ನೀರು ಹರಿಸಲಾಗುತ್ತಿದೆ. ಈಗಿರುವ 3500 ಕ್ಯುಸೆಕ್ ಹೊರಹರಿವನ್ನು ಸದ್ಯಕ್ಕೆ ಹೆಚ್ಚಿಗೆ ಮಾಡುವುದಿಲ್ಲ ಎಂದು ಪ್ರಭಾರಿ ಅಧೀಕ್ಷಕ ಎಂಜಿನಿಯರ್ ಬಿ.ಎಸ್. ಪಾಟೀಲ ತಿಳಿಸಿದರು.

ಆಲಮಟ್ಟಿ ಜಲಾಶಯದ ಮುಂಭಾಗ ಹಾಗೂ ನಾರಾಯಣಪುರ ಜಲಾಶಯದ ಹಿಂಭಾಗದಲ್ಲಿನ ಕೃಷ್ಣಾ ನದಿ ಹಿನ್ನೀರಿನಲ್ಲಿ ಮತ್ತೆ ಜೀವ ಕಳೆ ಬಂದಿದೆ.

## ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಭೇಟಿ ಮಾಡಿ ಚರ್ಚಿಸಿದ ಶಾಸಕ ಯತ್ನಾಳ
# ರಾಜ್ಯ ಸರ್ಕಾರದ ಮೇಲೆ ಕ್ರಮಕ್ಕೆ ಆಗ್ರಹಿಸಿ ಶಾಸಕ ಯತ್ನಾಳ ಮನವಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಬುಧವಾರ ನವ ದೆಹಲಿಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ, ವಿವಿಧ ವಿಷಯಗಳ ಕುರಿತು ಚರ್ಚಿಸಿದ್ದಾರೆ.

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಸರ್ಕಾರದ ಬೊಕ್ಕಸಕ್ಕೆ ಆಗುವ ನಷ್ಟದ ಬಗ್ಗೆ ಸ್ವತಃ ರಾಜ್ಯ ಸರ್ಕಾರದ ವಿತ್ತ ಇಲಾಖೆ ಎಚ್ಚರಿಸಿದರೂ ಸಹ ಈ ರೀತಿಯಾದ ಯೋಜನೆಗಳನ್ನು



ಅನುಷ್ಠಾನಗೊಳಿಸಿರುವುದರಿಂದ ರಾಜ್ಯ ದಿವಾಳಿ ಆಗುವುದರ ಬಗ್ಗೆ ವಿತ್ತ ಸಚಿವ–ರಿಗೆ ತಿಳಿಸಿ, ಕೇಂದ್ರ ಸರ್ಕಾರ ತನ್ನ ಅಧಿಕಾರವನ್ನು ಬಳಸಿ ಕೂಡಲೇ ಫಿಸ್ಕಲ್ ರೆಸ್ಪಾನ್ಸಿಬಿಲಿಟಿ ಅಂಡ್ ಬಜೆಟ್ ಮ್ಯಾನೇಜ್ಮೆಂಟ್ ಆಕ್ಟ್ ಕಾಯ್ದೆಯಡಿ ರಾಜ್ಯ ಸರ್ಕಾರದ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಮನವಿ ಮಾಡಲಾಯಿತು.

ಇದಲ್ಲದೆ, ಅಕ್ಕಿ ವಿತರಣೆಯಲ್ಲೂ ರಾಜ್ಯ ತಪ್ಪು ಹೆಜ್ಜೆ ಇಡುತ್ತಿದೆ. ದೇಶದಲ್ಲಿ ಅತಿ ಹೆಚ್ಚು ಬಿ.ಪಿ.ಎಲ್ ಕಾರ್ಡ್ ಹೊಂದಿರುವ ರಾಜ್ಯ ಕರ್ನಾಟಕವಾಗಿದೆ. ಆದರೆ, ಎಷ್ಟು ಬೋಗಸ್ ಕಾರ್ಡ್ ಗಳು ವಿತರಣೆಯಾಗಿದೆ ಎಂಬ ಆಡಿಟ್ ಇದುವರೆಗೂ ಆಗಿಲ್ಲ. ಬಡತನ ರೇಖೆಗಿಂತ ಮೇಲೆ ಇರುವವರೇ ಹೆಚ್ಚು ಬಿ.ಪಿ.ಎಲ್ ಕಾರ್ಡ್ ಹೊಂದಿದ್ದಾರೆ. ಸರ್ಕಾರ ಇವರ ಮೇಲೆ ಕ್ರಮ ಕೈಗೊಳ್ಳದೇ, ಎಲ್ಲರಿಗೂ ಉಚಿತ ಅಕ್ಕಿ ನೀಡುತ್ತಿದೆ ಎಂದೂ ರಾಜ್ಯ ಸರ್ಕಾರದ ಆರ್ಥಿಕ ಇಲಾಖೆ ನೀಡಿರುವ ವರದಿಯನ್ನು ತೋರಿಸಿ ವಿವರಿಸಿದೆ.

ಅತ್ಯಂತ ತಾಳ್ಮೆಯಿಂದ ಆಲಿಸಿದ ಸಚಿವರು, ವಿವರಗಳನ್ನು ಪರಿಶೀಲಿಸಿ ಈ ನಿಟ್ಟಿನಲ್ಲಿ ಅಗತ್ಯವನ್ನು ಮಾಡುವುದಾಗಿ ಭರವಸೆ ನೀಡಿದ್ದಾರೆಂದು ಶಾಸಕರು ತಿಳಿಸಿದ್ದಾರೆ.

### ರಾಜ ನುಡಿ

ಚಹಾ ಸೋಸಿ ಕುಡಿಯುವ ಹಾಗೆ
ನೀರನ್ನು ಫಿಲ್ಟರ್ ಮಾಡುವ ಹಾಗೆ
ಒಳ ಬರುವ ಮತ್ತು ಹೊರ
ಹೋಗುವ ವಿಚಾರಗಳನ್ನು
ಸೋಸಿ ಫಿಲ್ಟರ್
ಮಾಡುವದಾಗಿದ್ದರೆ ಸಮಾಜದ
ಚಿತ್ರಣವೇ ಬದಲಾಗಿರುತ್ತಿತ್ತು..

–ಡಾ. ರಾಜಶೇಖರ ನಾಗೂರ

### ವಚನ ಚಿಂತನ

*ಮಾಡುವ ಮಾಡಿಸಿಕೊಂಬ*
*ಎರಡರ ನಡುವೆಸಂದುಭೇದ ಉಂಟೆ ದೇವಾ*
*ಕಾಯ ಪ್ರಾಣದ ಸಂಗದಂತೆ ಇದ್ದುದಲ್ಲದೆ.*
*ಬಲ್ಲಂತೆ ಮಾಡು,ಬಲ್ಲಂತೆ ನೀಡು,*
*ನಾನರಿಯೆನೆಂಬುದು ನಿಮಗುಚಿತವೆ*
*ಮಾಡುವಲ್ಲಿ ನೀಡುವಲ್ಲಿ ಹೇಳಿ*
*ಮಾಡಿಸಿಕೊಂಬುದಲ್ಲದೆ.*
*ಕೈ ಕಲಸಿದಡೆ ಬಾಯಿಗೆ ಹಂಗುಂಟೆ*
*ಕೂಡಲಸಂಗಮದೇವಾ*

ಅಂಗವು ಲಿಂಗವೆಂಬ ಅರಿವು ಜಾಗೃತವಾದಾಗ ಉಂಟಾಗುವ ಅವಿಚ್ಛಿನ್ನದ ಅನುಭಾವವನ್ನು ಬಸವಣ್ಣನವರು ಇಲ್ಲಿ ವಚನಗೈ ದಿದ್ದಾರೆ. ಕಾಯಕದಲ್ಲಿ ನಿರತನಾದ ಶರಣನಿಗೆ ಕಾಯಕದಿಂದ ತಾನು ಭಿನ್ನ ಎಂಬ ಭಾವ ಮೂಡದೆ, ಮಾಡುವ ಮಾಡಿಸಿಕೊಂಬ

ಎರಡರ ನಡುವೆಸಂದುಭೇದವಿರದು ಎಂಬುದು ಕಾಯ ಮತ್ತು ಪ್ರಾಣಗಳು ಒಂದನ್ನೊಂದು ಹೇಗೆ ಬೇರೆಯಾಗಿ ನೋಡಲು ಸಾಧ್ಯವಿಲ್ಲವೋ ಹಾಗೆ ಅಂಗಲಿಂಗದ ಸಂಯೋಗ.ಮಾಡುವವನು ನೀನೇ ಮಾಡಿಸಿಕೊಳ್ಳುವವನೂ ನೀನೇ ಆಗಿರುವ ಪ್ರಯುಕ್ತ, ನ(ನಿ)ನ್ನಿಂದ ಒಳ್ಳೆಯದನ್ನೇ ಮಾಡಿಸು (ಬಲ್ಲಂತೆ ಮಾಡು,ಬಲ್ಲಂತೆ ನೀಡು,) ಎಂದು ಅರಿಕೆ ಮಾಡಿಕೊಂಡಿದ್ದಾರೆ.ಪ್ರಸ್ತುತ ಜರುಗುವ ಎಲ್ಲ ಘಟನೆಗಳಿಗೆ ನೀನೇ ಕಾರಣ ಇದರಲ್ಲಿ ನನ್ನದೇನು ಪಾತ್ರವಿಲ್ಲ ಎನ್ನುವುದು ಉಚಿತವಲ್ಲ ಏಕೆಂದರೆ ಇಲ್ಲಿ ನಾನು ಮತ್ತು ನೀನು ಎಂಬ ಭೇದದ ಕಲ್ಪನೆಯೇ ತಪ್ಪು ಎಂದಿದ್ದಾರೆ. ಬಯಸುವ ಬಯಕೆಗಳೇ ನೀನಾಗಿರುವಾಗ ಈಡೇರದು ಎಂಬ ಬಗ್ಗೆ ಆತಂಕ ಬೇಡ ಎನ್ನುವುದಕ್ಕಾಗಿ ಸೇವಿಸುವ ಆಹಾರವನ್ನು ತಟ್ಟೆಯಲ್ಲಿಂದ ಬಾಯಿಗೆ ತಂದಿಡುವ ಕೈಗೆ ತಾನು ಬಾಯಿಗೆ ಉಪಕಾರ ಮಾಡುತ್ತಿ ರುವೆ ಎಂಬ ಭಾವನೆಯನ್ನು ಹೇಗೆ ಮರೆತಿ–ರುತ್ತದೆಯೋ ಹಾಗೆ ನಮ್ಮ ಎಲ್ಲ ಬೇಕು ಬೇಡಿಕೆಗಳನ್ನು ಬೇಡುವ ಮತ್ತು ನೀಡುವವನು ನೀನೇ ಆಗಿದ್ದೀಯ ಎಂಬ ಸತ್ಯವನ್ನು ಬಿಚ್ಚಿಟ್ಟಿದ್ದಾರೆ.ಅದೇ ಕಾರಣಕ್ಕಾಗಿ ತಮ್ಮ ಮತ್ತೊಂದು ವಚನದಲ್ಲಿ ಎನ್ನ ವಾಮ–ಕ್ಷೇಮ ನಿಮ್ಮದಯ್ಯ ಎನ್ನ ಹಾನಿ–ವೃದ್ಧಿ ನಿಮ್ಮದಯ್ಯ ಎನ್ನುತ್ತಾ ಎನ್ನಂಗ ವು ಲಿಂಗ ಎಂಬ ಭಾವನೆಯಿಂದ ನಿಶ್ಚಿಂತರಾಗಿರಲು ತಿಳಿಸಿದ್ದಾರೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

## ದುರ್ವಾಸನೆಯುಕ್ತ ಶಾಲಾ ಪರಿಸರ | ಡೆಂಗ್ಯೂ–ಮಲೇರಿಯಾ ಭೀತಿ | ಮೂಲಸೌಕರ್ಯಗಳ ಕೊರತೆ | ಸ್ಪಂದಿಸದ ಅಧಿಕಾರಿಗಳು
# ’ಇಲ್ಲ’ಗಳ ಸಾಮ್ರಾಜ್ಯದಲ್ಲಿ ನರಳುತ್ತಿರುವ ಓತಿಹಾಳ ಪ್ರೌಢಶಾಲೆ ಮಕ್ಕಳು

**ಉದಯರಶ್ಮಿ ನ್ಯೂಸ್**
– ಇಂದುಶೇಖರ ಮಣೂರ



ವಿಜಯಪುರ: ಈ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಬಿಸಿಯೂಟದ ಸೌಲಭ್ಯ ಉಂಟು, ಆದರೆ ಕುಡಿಯಲು – ತೊಳೆಯಲು ನೀರಿಲ್ಲ. ವಿಶಾಲ ಮೈದಾನವುಂಟು, ತಡೆಗೋಡೆ (ಕಂಪೌಂಡ್) ಇಲ್ಲ. ಶೌಚಾಲಯ ಉಂಟು, ಬಳಕೆಯಲ್ಲಿಲ್ಲ. ಇನ್ನು ಶಾಲಾ ಆವರಣದ ಪರಿಸರದಲ್ಲಿ ಸ್ವಚ್ಛತೆಯಂತೂ ಇಲ್ಲ.. ಇಲ್ಲ.. ಇಲ್ಲ. ಹೀಗೆ ’ಇಲ್ಲ’ಗಳ ಸಾಮ್ರಾಜ್ಯದಲ್ಲಿ ನರಳುತ್ತಿರುವ ಶಾಲೆಯೊಂದು ಜಿಲ್ಲೆಯ ಸಿಂದಗಿ ತಾಲೂಕಿನ ಓತಿಹಾಳ ಗ್ರಾಮದಲ್ಲಿರುವುದು ಮಾತ್ರ ’ಹೌದು’.

ಓತಿಹಾಳ ಗ್ರಾಮದ ಸರಕಾರಿ ಪ್ರೌಡಶಾಲೆ ಸುಮಾರು 8 ಎಕರೆ ಪ್ರದೇಶವನ್ನು ಹೊಂದಿದೆ. ಬಹುಶಃ ಜಿಲ್ಲೆಯಲ್ಲಿ ಇಷ್ಟೊಂದು ವಿಶಾಲವಾದ ವಿಸ್ತೀರ್ಣ ಹೊಂದಿದ ಶಾಲೆ ಬೇರೊಂದು ಇರಲಿಕ್ಕಿಲ್ಲ. ಇದೊಂದೇ ಈ ಶಾಲೆಗಿರುವ ಹೆಗ್ಗಳಿಕೆ. ಉಳಿದಂತೆ ಈ ಶಾಲಾ ಮಕ್ಕಳು ಅನುಭವಿಸುತ್ತಿರುವ ಸಮಸ್ಯೆಗಳೂ ಸಹ ವಿಶಾಲವಾಗಿವೆ.

ಓತಿಹಾಳ ಗ್ರಾಮದಲ್ಲಿರುವ ಸರಕಾರಿ ಪ್ರೌಢಶಾಲೆಯಲ್ಲಿ ಸುಮಾರು 150 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಇಲ್ಲಿ 8, 9 ಮತ್ತು 10 ನೇ ತರಗತಿಗಳ ಕಲಿಕೆಗೆ ಅವಕಾಶವಿದೆ. ಆದರೆ ಇಲ್ಲಿಯ ಮಕ್ಕಳಿಗೆ ನಿರಾತಂಕವಾಗಿ ವಿದ್ಯಾಭ್ಯಾಸ ಮಾಡುವ ವಾತಾವರಣ ಮಾತ್ರ ಇಲ್ಲಿಲ್ಲ. ಈ ಶಾಲೆಯ ಪರಿಸರ ಶೋಚನೀಯವಾಗಿದೆ. ಈ ಶಾಲೆಗೆ ಕಂಪೌಂಡೇ ನಿರ್ಮಾಣವಾಗಿಲ್ಲ. 3 ವರ್ಷಗಳ ಹಿಂದೆ ಗ್ರಾಮ ಪಂಚಾಯತಿಯು ಇಲ್ಲಿ ಕಂಪೌಂಡ್ ಕಾಮಗಾರಿ ಶೇ.25 ರಷ್ಟು ಮಾತ್ರ ಮಾಡಿ ಕೈತೊಳೆದುಕೊಂಡಿದೆ.

ಇನ್ನು ಶಾಲಾ ಆವರಣದಲ್ಲಿ ಶಾಲಾ ಕಟ್ಟಡಕ್ಕೆ ಹೊಂದಿಕೊಂಡೇ ಸದಾಕಾಲ ಕೊಳಚೆ ನೀರು ನಿಂತು ಇದು ಗ್ರಾಮದ ಹಂದಿಗಳಿಗೆ ವಿಹಾರ ತಾಣವಾಗಿ ಮಾರ್ಪಟ್ಟಿದೆ. ಸೊಳ್ಳೆಗಳ ಸಂತಾನೋತ್ಪತ್ತಿ ಕೇಂದ್ರವಾಗಿದೆ. ರಾಜ್ಯಾದ್ಯಂತ ಡೆಂಗ್ಯೂ, ಮಲೇರಿಯಾ ಮಾರಿ ಹರಡುತ್ತಿರುವ ಈ ವಿಷಮ ಪರಿಸ್ಥಿತಿಯಲ್ಲಿ ಇಲ್ಲಿಯ ಮಕ್ಕಳು ಮತ್ತು ಶಿಕ್ಷಕರ ಆರೋಗ್ಯ ಎಷ್ಟರಮಟ್ಟಿಗೆ ಸುರಕ್ಷಿತ ಎಂಬುದನ್ನು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಗಂಭೀರವಾಗಿ ಯೋಚಿಸಬೇಕಿದೆ. ಸಾಂಕ್ರಾಮಿಕ ರೋಗ ಹರಡುವ ಮುನ್ನವೇ ಅವರು ಕ್ರಮ ಕೈಗೊಳ್ಳಬೇಕಿದೆ.

ಶಾಲಾ ಕಿಟಕಿಗಳ ಪಕ್ಕದಲ್ಲೇ ಕೊಳಚೆ ನೀರಿನ ಸಂಗ್ರಹವಿರುವುದರಿಂದ ಅದರ ದುರ್ವಾಸನೆಯಂತೂ ತಡೆಯಲಸಾಧ್ಯವಾಗಿದೆ. ಇದರಿಂದ ಶಿಕ್ಷಕರು ಮತ್ತು ಮಕ್ಕಳು ನಿತ್ಯ ನರಕಯಾತನೆ ಅನುಭವಿಸುವಂತಾಗಿದೆ. ತುರ್ತಾಗಿ ಇಲ್ಲಿಯ ಗ್ರಾಪಂ ಅಧಿಕಾರಿಗಳು ಈ ಸಮಸ್ಯೆಗೆ ಮುಕ್ತಿ ನೀಡಬೇಕಿದೆ.



“ನಾನು ಕಾರ್ಯ ನಿಮಿತ್ತ ಇತ್ತೀಚೆಗೆ ಶಾಲಾ ಕಚೇರಿ ಮತ್ತು ತರಗತಿ ಕೋಣೆಗೆ ಹೋದಾಗ ಅಲ್ಲಿಯ ದುರ್ವಾಸನೆ ಸಹಿಸಲಸಾಧ್ಯವಾಗಿ ಮೂಗು ಮುಚ್ಚಿಕೊಂಡೇ ಇರಬೇಕಾಯ್ತು. ಇಲ್ಲಿ ಶಿಕ್ಷಕರು ಹಾಗೂ ಮಕ್ಕಳು ಈ ಕೆಟ್ಟ ವಾಸನೆಯನ್ನು ಅದ್ಹೇಗೆ ಸಹಿಸಿಕೊಳ್ತಾರೆಂಬುದನ್ನು ನೆನೆಸಿಕೊಂಡರೇನೇ ಸಂಕಟವಾಗುತ್ತೆ. ಕ್ರಿಯಾಶೀಲರೆನಿಸಿಕೊಂಡಿರುವ ಶಾಸಕ ಅಶೋಕ ಮನಗೂಳಿ ಕೂಡಲೇ ಇಲ್ಲಿ ಕೊಳವೆ ಬಾವಿ ಕೊರೆಸಿ ನೀರಿನ ಅನುಕೂಲ ಮಾಡಿಕೊಡಬೇಕು.”

– ಶಿವಾನಂದ ಎಸ್.ಸಾಲಿಮಠ, ಗ್ರಾಮಸ್ಥರು, ಓತಿಹಾಳ

ಪಾಲಿಗೆ ಅದು ಇದ್ದೂ ಇಲ್ಲದಂತಾಗಿದೆ. ಹೀಗಾಗಿ ವಿದ್ಯಾರ್ಥಿಗಳು ತಮ್ಮ ದೇಹಬಾಧೆ ತೀರಿಸಿಕೊಳ್ಳಲು ಶಾಲೆಯ ಮುಂದಿನ ಬಯಲನ್ನೇ ಆಶ್ರಯಿಸಿದ್ದಾರೆ. ಆದ–’ರೆ ಇಲ್ಲಿ ಓದುತ್ತಿರುವ ಅಂದಾಜು 70 ಕ್ಕೂ ಅಧಿಕ ಹೆಣ್ಣುಮಕ್ಕಳು ಏನು ಮಾಡಬೇಕು? ಅವರು ನಿತ್ಯ ಮೌನವಾಗಿ ಚಿತ್ರಹಿಂಸೆ ಅನುಭವಿಸುತ್ತಲೇ ಸಮಯ ತಳ್ಳುವಂತಾಗಿದೆ. ಇಂತಹ ಸೂಕ್ಷ್ಮತೆಗಳು ಸಂಬಂಧಿಸಿದ ಅಧಿಕಾ–ರಿಗಳಿಗೆ, ಜನಪ್ರತಿನಿಧಿಗಳಿಗೆ ಅರ್ಥ–’ವಾಗುವುದಾದರೂ ಯಾವಾಗ? ಎಂಬ ಪ್ರಶ್ನೆ ವಿದ್ಯಾರ್ಥಿನಿಯರದ್ದು.

ಮುಖ್ಯವಾಗಿ ಈ ಶಾಲೆಯಲ್ಲಿ ಮಕ್ಕಳು ತಮ್ಮ ದಾಹ ತೀರಿಸಿಕೊಳ್ಳಲು ಅಗತ್ಯವಾದ ಜೀವಜಲವೇ ಇಲ್ಲಿಲ್ಲ. ದಾಹವಾದಾಗ ಮತ್ತು ಬಿಸಿಯೂಟ ಸೇವಿಸಿದ ಬಳಿಕ ಶಾಲೆಯಾಚೆ ಕೊಂಚ ದೂರದಲ್ಲಿರುವ ಕೊಳವೆ ಬಾವಿಗೆ ಹೋಗಿ ಕೈಪಂಪ್ ಹೊಡೆದು ನೀರು ಕುಡಿಯಬೇಕು. ತಟ್ಟೆಯನ್ನು ಸಹ ಅಲ್ಲಿಗೇ ತೆಗೆದುಕೊಂಡು ಹೋಗಿ ತೊಳೆಯಬೇಕು. ಕೈಪಂಪ್ ಕೆಟ್ಟರಂತೂ ಈ ಮಕ್ಕಳ ಪರಿಸ್ಥಿತಿ ಯಾರಿಗೂ ಬೇಡ..



“ಓತಿಹಾಳ ಪ್ರೌಢಶಾಲೆಯ ಆವರಣದಲ್ಲಿರುವ ಗಲೀಜು, ಹಂದಿಗಳ ಹಾವಳಿ ನೋಡಲು ಅಸಹ್ಯವಾಗಿದೆ. ಅದರ ಗಬ್ಬು ವಾಸನೆಯಲ್ಲಿಯೇ ಮಕ್ಕಳು ವ್ಯಾಸಂಗ ಮಾಡಬೇಕು. ಶಿಕ್ಷಕರು ಈ ಕೆಟ್ಟ ಪರಿಸರದಲ್ಲಿಯೇ ತರಗತಿ ನಿರ್ವಹಣೆ ಮಾಡಬೇಕು. ಹೀಗಿದ್ದರೂ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಈವರೆಗೂ ಇದಕ್ಕೆ ಕ್ಯಾರೇ ಎನ್ನದಿರುವುದು ದುರದೃಷ್ಟಕರ.”

– ಪ್ರವೀಣ ಹಾಲಹಳ್ಳಿ, ಸಾಮಾಜಿಕ ಹೋರಾಟಗಾರರು, ಸಿಂದಗಿ



ಇನ್ನು ಶಾಲೆಯಲ್ಲಿ ಶೌಚಾಲಯವಿದ್ದರೂ ನೀರಿನ ಸೌಲಭ್ಯವಿರದ ಕಾರಣ ವಿದ್ಯಾರ್ಥಿಗಳ

ಕಳೆದ ಹಲವಾರು ವರ್ಷಗಳಿಂದ ಶಾಲಾ ಆವರಣದಲ್ಲಿ ಕೊಳವೆ ಬಾವಿ




ನಿರ್ಮಿಸಿ ಮಕ್ಕಳಿಗೆ ಕುಡಿಯುವ ನೀರಿನ ಸೌಕರ್ಯ ಕಲ್ಪಿಸಿಕೊಡುವಂತೆ ಹಿಂದೆ ಅಧಿಕಾರದಲ್ಲಿದ್ದ ಶಾಸಕ ರಮೇಶ ಭೂಸನೂರ ಮತ್ತು ಸಚಿವ ದಿ. ಎಂ.ಸಿ.ಮನಗೂಳಿ ಅವರಿಗೂ ಹಲವು ಬಾರಿ ಮನವಿ ಸಲ್ಲಿಸಿ ಅಲವತ್ತುಕೊಂಡರೂ ಅವರು ಆಗ ನೀಡಿದ ಭರವಸೆ ಕೇವಲ ಭರವಸೆಯಾಗಿಯೇ ಉಳಿಯಿತು. ಇನ್ನು ಈಗ ಅಧಿಕಾರದಲ್ಲಿರುವ ಶಾಸಕ ಅಶೋಕ ಮನಗೂಳಿಯವರಿಗೆ ಮೌಖಿಕವಾಗಿ ಮನವಿ ಮಾಡಿಕೊಂಡಿದ್ದು ಅವರು ಮಾಡಿಕೊಡುವ ಭರವಸೆ ನೀಡಿದ್ದು ಕಾರ್ಯರೂಪಕ್ಕೆ ಬರುವ ಕುರಿತು ಕಾದು ನೋಡಬೇಕಿದೆ ಎನ್ನುತ್ತಾರೆ ಗ್ರಾಮದ ಶಿವಾನಂದ ಎಸ್. ಸಾಲಿಮಠ, ಕಿರಣ–ಕುಮಾರ ನಾಟೀಕಾರ, ಸುನೀಲಕುಮಾರ ಮಣೂರ, ಶಾಂತಗೌಡ ಬಿರಾದಾರ, ಶಿವಪುತ್ರ ಬೂದಿಹಾಳ ಸೇರಿದಂತೆ ಹಲವು ಗ್ರಾಮಸ್ಥರು.

ಇನ್ನಾದರೂ ಈ ಶಾಲೆಯ ಸಮಸ್ಯೆಗಳನ್ನು ಸಂಬಂಧಿಸಿದ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಗಂಭೀರವಾಗಿ ಪರಿಗಣಿಸಿ, ಪಾಲಕರೊಂದಿಗೆ ಗ್ರಾಮಸ್ಥರು ಪ್ರತಿಭಟನೆಯ ಮಾರ್ಗ ಹಿಡಿಯುವ ಮುನ್ನವೇ ಎಚ್ಚೆತ್ತು ಈ ’ಇಲ್ಲ’ಗಳ ಸಾಮ್ರಾಜ್ಯವನ್ನು ಪತನಗೊಳಿಸಿ, ಮಕ್ಕಳಿಗೆ ಅನುಕೂಲ ಕಲ್ಪಿಸಿಕೊಡಬೇಕೆಂಬುದು ಗ್ರಾಮಸ್ಥರ ಒಕ್ಕೊರಲಿನ ಆಗ್ರಹವಾಗಿದೆ.

“ಶಾಲಾ ಆವರಣದಲ್ಲಿ ಹರಡಿರುವ ಕೊಳಚೆ ನೀರಿನ ದುರ್ವಾಸನೆ ತಡೆಯಲು ಹಾಗೂ ಡೆಂಗ್ಯೂ ಮೊದಲಾದ ರೋಗ ಹರಡದಂತೆ ಮುಂಜಾಗೃತೆ ವಹಿಸಲು ಶಾಲಾ ಆವರಣಕ್ಕೆ ನೀರು ಹರಿದು ಬರುವುದನ್ನು ನಿಲ್ಲಿಸಲು ಬಂದಾಳ ಗ್ರಾಪಂ ಅಧ್ಯಕ್ಷರು ಮತ್ತು ಗ್ರಾಪಂ ಅಭಿವೃದ್ಧಿ ಅಧಿಕಾರಿಗಳಿಗೆ ಇದೇ ಜು.7 ರಂದು ಮನವಿ ಸಲ್ಲಿಸಿರುವೆ. ಅದಕ್ಕೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.”

– ಡಿ.ಬಿ.ದೊಡಮನಿ, ಮುಖ್ಯ ಗುರು, ಸರಕಾರಿ ಪ್ರೌಢಶಾಲೆ, ಓತಿಹಾಳ



# ಯಾವುದೇ ಮಕ್ಕಳು ಲಸಿಕೆಯಿಂದ ವಂಚಿತವಾಗದಿರಲಿ :ಮೇಯರ್ ಹೊರ್ತಿ

**ಉದಯರಶ್ಮಿ ನ್ಯೂಸ್**



ವಿಜಯಪುರ: ಲಸಿಕೆಯಿಂದ ಯಾವುದೇ ಮಕ್ಕಳು ವಂಚಿತವಾಗದಂತೆ ನೋಡಿಕೊಂಡು ಶಾಲೆಯಿಂದ ಹೊರಗುಳಿದ, ಅಂಗನವಾಡಿ ಕೇಂದ್ರದ ಮಕ್ಕಳು ಸೇರಿದಂತೆ ಪ್ರತಿ ಮನೆ–ಮನೆಗಳ ಮಾಹಿತಿ ಸಂಗ್ರಹಿಸಿ ಯಶಸ್ವಿಯಾಗಿ ಲಸಿಕಾಕರಣ ಹಾಗೂ ವಿವಿಧ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಂತೆ ಮಹಾನಗರ ಪಾಲಿಕೆ ಮಹಾಪೌರೆ ಶ್ರೀಮತಿ ಮಹೇಜಬಿನ್ ಹೊರ್ತಿ ಅವರು ಸೂಚಿಸಿದರು.

ಮಕ್ಕಳಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಮುಂಜಾಗೃತಾ ಕ್ರಮವಾಗಿ ವಿವಿಧ ಲಸಿಕಾ ಕಾರ್ಯಕ್ರಮಗಳನ್ನು ಆಯೋಜಿಸಲು ಸರ್ಕಾರ ನಿಗದಿಪಡಿಸಿರುವ ಮಾರ್ಗಸೂಚಿಯನ್ನು ಪಾಲಿಸಿ ವಿಜಯಪುರ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ಲಸಿಕಾಕರಣ ಮತ್ತು ವಿವಿಧ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನ ಗೊಳಿಸುವ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಭಾಂಗಣದಲ್ಲಿ ಗುರುವಾರ ನಡೆದ ಸಭೆಯಲ್ಲಿ ಅವರು ಸೂಚಿಸಿದರು.

ಪಾಲಿಕೆ ವ್ಯಾಪ್ತಿಯ 35 ವಾರ್ಡಗಳಲ್ಲಿ ಜವಾಬ್ದಾರಿಯುತವಾಗಿ ತಮ್ಮ ವ್ಯಾಪ್ತಿಯ ಸ್ಥಿತಿಗತಿ, ಮಕ್ಕಳ ಜನಸಂಖ್ಯೆ, ಅಂಗನವಾಡಿ ಕೇಂದ್ರಗಳು, ಶಾಲೆಗಳನ್ನು ಗುರುತಿಸಿ ಯಾವುದೇ ಮಕ್ಕಳು ಲಸಿಕಾಕರಣದಿಂದ ಹೊರಗುಳಿಯದಂತೆ ಲಸಿಕೆ ನೀಡಲು ಪ್ರಚಾರ ಹಾಗೂ ಪ್ರತಿ ಮನೆಗಳ ಮಾಹಿತಿಯನ್ನು ಸಂಗ್ರಹಿಸಿ ಆರೋಗ್ಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರ, ಸಿಡಿಪಿಒ ಹಾಗೂ ಶಾಲಾ ಶಿಕ್ಷಣ ಇಲಾಖೆಯ ಸಹಭಾಗಿತ್ವದಲ್ಲಿ ನಗರದ ಎಲ್ಲಾ ವಾರ್ಡ್ಗಳ ಮಕ್ಕಳು, ಶಾಲೆಯಿಂದ ಹೊರಗುಳಿದ, ವಲಸೆ ಕಾರ್ಮಿಕರ ಮಕ್ಕಳ ಬಗ್ಗೆ ಮಾಹಿತಿ ಕ್ರೋಡೀಕರಿಸಿ ಪ್ರಥಮಾದ್ಯತೆಯ ಮೇರೆಗೆ ಲಸಿಕೆ ನೀಡುವಂತೆ ಅವರು ಸೂಚನೆ ನೀಡಿದರು.

ಮಹಾನಗರ ಪಾಲಿಕೆ ಆಯುಕ್ತ ವಿಜಯ ಮೆಕ್ಕಳಕಿ ಮಾತನಾಡಿ, ನಗರದ 35 ವಾರ್ಡ್ಗಳಲ್ಲಿ ಈಗಾಗಲೇ ಸ್ವಚ್ಚತೆಗೆ ಆದ್ಯತೆ ನೀಡಲಾಗಿದೆ.. ವಿವಿಧ ಹಂತಗಳಲ್ಲಿ ಲಸಿಕೆ ನೀಡಲಾಗುವುದರಿಂದ ಎಲ್ಲಾ ವಾರ್ಡಗಳ ಸದಸ್ಯರೊಂದಿಗೆ ಸಭೆ ನಡೆಸಿ ಅವರಿಗೆ ಮಾಹಿತಿ ಒದಗಿಸಲಾಗುವುದು ಎಂದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಬಸವರಾಜ ಹುಬ್ಬಳ್ಳಿ ಮಾತನಾಡಿ, ಈಗಾಗಲೇ ಡೆಂಗ್ಯೂ ಪ್ರಕರಣಗಳಿಗೆ ಸಂಬಂಧಿಸಿದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮಕ್ಕಳ ಆರೋಗ್ಯ ಸದೃಡತೆಗೆ ಪ್ರಥಮಾಧ್ಯತೆಯ ಮೇರೆಗೆ ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸಲು ವಿವಿಧ ಇಲಾಖೆಗಳ ಸಹಯೋಗದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಹೇಳಿದರು.

ಸಭೆಯಲ್ಲಿ ಉಪಮಹಾಪೌರ ದಿನೇಶ ಹಳ್ಳಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಕೆ.ಕೆ.ಚವ್ಹಾಣ, ಎಸ್.ಎಲ್. ಲಕ್ಕಣವರ, ಕೆ.ಡಿ. ಗುಂಡಬಾವಡಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತ–ರಿದ್ದರು.

# ಡೆಂಗ್ಯೂ ರೋಗದ ಬಗ್ಗೆ ಎಚ್ಚರವಿರಲಿ, ಭಯ ಬೇಡ :ಮೇಟಿ

**ಉದಯರಶ್ಮಿ ನ್ಯೂಸ್**



ನಿಡಗುಂದಿ: ಸರ್ಕಾರಿ ಪ್ರೌಢಶಾಲೆ ಕಮದಾಳ ಪ್ಲಾಟ್ ದಲ್ಲಿ ಋತು ಚಕ್ರ ಸಮಯದಲ್ಲಿ ಶುಚಿತ್ವ ನಿರ್ವಹಣೆ ಮತ್ತು ಋತು ಬಂಧದ ಕುರಿತು ಅರಿವು ಅವಶ್ಯ ಎಂದು ಹಿರಿಯ ಉಪನ್ಯಾಸಕಿ ಗೀತಾಂಜಲಿ ಹೇಳಿದರು.

ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ ಬೆಂಗಳೂರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಜಯಪೂರ, ತಾಲುಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ಬಸವನಬಾಗೇವಾಡಿ, ಸಮುದಾಯ ಆರೋಗ್ಯ ಕೇಂದ್ರ ನಿಡಗುಂದಿ ಹಾಗು ಸರ್ಕಾರಿ ಪ್ರೌಢಶಾಲೆ ಕಮದಾಳ ಪ್ಲಾಟ್ ಇವರ ಸಂಯುಕ್ತ ಆಶ್ರಯದಲ್ಲಿ, ರಾಜ್ಯ ಆರೋಗ್ಯ ಸಂಸ್ಥೆಯ ಪ್ರಶಿಕ್ಷಣಾರ್ಥಿಗಳ ಕ್ಷೇತ್ರ ಅಧ್ಯಯನ ಕಾರ್ಯಕ್ರಮದ ಅಂಗವಾಗಿ ಜರುಗಿದ ಕಾರ್ಯಕ್ರಮ ಉಧ್ಘಾಟಿಸಿ ಮಾತನಾಡುತ್ತಾ ಅವರು, ಋತು ಚಕ್ರದ ಕಾಲಾವದಿ,ಆ ಅವದಿಯಲ್ಲಿಯ ತೊಂದರೆಗಳು, ಮೂಡನಂಬಿಕೆಗಳಿಂದ ಆಗುವ ದುಷ್ಪರಿಣಾಮಗಳು, ಶುಚಿತ್ವ ಕಾಪಾಡುವ ಕುರಿತು ಹಾಗು ಆರೋಗ್ಯ ಸಮಸ್ಯೆ ಕುರಿತು ಮಾಹಿತಿ ನೀಡಿದರು.

ತಾಲುಕಾ ಆರೋಗ್ಯ ಶಿಕ್ಷಣಾಧಿಕಾರಿ ಹಾಗು ಪ್ರಶಿಕ್ಷಣಾರ್ಥಿಗಳ ಮಾರ್ಗದರ್ಶಕ ಎಸ್ ಎಸ್ ಮೇಟಿ, ರಾಜ್ಯ ಆರೋಗ್ಯ ಸಂಸ್ಥೆಯ ಕ್ಷೇತ್ರ ಅಧ್ಯಯನವು ನಮ್ಮ ಗ್ರಾಮಿಣ ಹೆಣ್ಣುಮಕ್ಕಳಲ್ಲಿ ಋತು ಚಕ್ರದ ಬಗ್ಗೆ ಇರುವ ಜ್ಞಾನದ ಕೊರತೆಯನ್ನು ಹೋಗಲಾಡಿಸಲು ಸಹಕಾರಿಯಾಗಿದೆ ಎಂದು ಹೇಳಿದರು.

ಇದೆ ಸಂದರ್ಭದಲ್ಲಿ ರಾಜ್ಯಾದ್ಯಾಂತ ಉಲ್ಬಣಗೊಂಡಿರುವ ಡೆಂಗ್ಯೂ ರೋಗ ನಿಯಂತ್ರಣ ಕುರಿತು ಮಾಹಿತಿ ನೀಡಿ ಜನರಿಗೆ ರೋಗದ ಬಗ್ಗೆ ಎಚ್ಚರ ಇರಲಿ, ಭಯ ಬೇಡ ಎಂದು ಸಲಹೆ ನೀಡಿದರು.

ಪ್ರೌಢ ಶಾಲೆಯ ಮುಖ್ಯೋಪಾದ್ಯಾಯ ವಿಜಯಕುಮಾರ ದಾಸಪ್ಪನವರ ಅಧ್ಯಕ್ಷತೆ ವಹಿಸಿದ್ದರು, ಹಿರಿಯ ಆರೋಗ್ಯ ನಿರಿಕ್ಷಣಾಧಿಕಾರಿ ಜೆ ಸಿ ಮುಚ್ಚಂಡಿ, ಶಿಕ್ಷಕರಾದ ಎಸ್ ಎಸ್ ಹೊಸಮನಿ, ಪಿ ಬಿ ಕೂಚಬಾಳ, ಪಿ ಎಸ್ ಗುರಡ್ಡಿ, ಆರ್ ಎಸ್ ವಡ್ಡರ್,ಎಸ್ ಪಿ ಕುರುಗೋಡಿ, ಶಿಕ್ಷಕಿಯರಾದ ಆರ್ ಬಿ ಪಾಟಿಲ, ಜಿ ವಾಯ್ ಕೆಂಪವಾಡ ಹಾಗೂ ಆಶಾ ಕಾರ್ಯಕರ್ತೆಯರು ಹಾಜರಿದ್ದರು.

ಪ್ರಾರಂಭದಲ್ಲಿ ವಿದ್ಯಾರ್ಥಿನಿಯರು ಪ್ರಾರ್ಥನೆ ಗೀತೆ ಹಾಡಿದರು, ಪ್ರಶಿಕ್ಷಣಾರ್ಥಿ ರೇಣುಕಾ ಜಡಗನ್ನವರ ಕಾರ್ಯಕ್ರಮ ನಿರೂಪಿಸಿ, ಕೊನೆಯಲ್ಲಿ ವಂದಿಸಿದರು.

# ವಿಶ್ವ ಜನಸಂಖ್ಯಾ ದಿನಾಚರಣೆ ಜನಜಾಗೃತಿ ರ್‍ಯಾಲಿಗೆ ಚಾಲನೆ

**ಉದಯರಶ್ಮಿ ನ್ಯೂಸ್**



ವಿಜಯಪುರ: ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕಾ ಆರೋಗ್ಯಾಧಿಕಾರಿಗಳ ಹಾಗೂ ವಿವಿಧ ನರ್ಸಿಂಗ್ ಕಾಲೇಜಗಳು ವಿಜಯಪುರ ಇವರ ಸಂಯುಕ್ತ ಆಶ್ರಯದಲ್ಲಿ ಗುರುವಾರ ನಗರದ ಸಿದ್ದೇಶ್ವರ ದೇವಸ್ಥಾನದಿಂದ ಏರ್ಪಡಿಸಿದ ಜಿಲ್ಲಾಮಟ್ಟದ ವಿಶ್ವ ಜನಸಂಖ್ಯಾ ದಿನಾಚರಣೆಯ ಜನಜಾಗೃತಿ ರ್‍ಯಾಲಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಉತ್ತರ ಕರ್ನಾಟಕ ಉಪನಿರ್ದೇಶಕ ಡಾ॥ ಚನ್ನಮ್ಮ ಕಟ್ಟಿ, ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ॥ ಬಸವರಾಜ ಹುಬ್ಬಳಿ ರವರು ಜಂಟಿಯಾಗಿ ಹಸಿರು ನಿಶಾನೆ ತೋರಿಸಿ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಉತ್ತರ ಕರ್ನಾಟಕ ಉಪನಿರ್ದೇಶಕ ಡಾ॥ ಚನ್ನಮ್ಮ ಕಟ್ಟಿ ಅವರು ಮಾತನಾಡಿ ಮಿತಿಮೀರಿದ ಜನಸಂಖ್ಯೆ ದೇಶದ ಅಭಿವೃದ್ದಿಗೆ ಮಾರಕವಾಗಿದೆ. ಜನಸಂಖ್ಯೆ ನಿಯಂತ್ರಣಕ್ಕೆ ಜಾಗೃತಿ ಅತ್ಯವಶ್ಯಕವಾಗಿದೆ. ಪ್ರತಿಯೊಬ್ಬರಲ್ಲೂ ತಿಳುವಳಿಕೆ ಮೂಡಬೇಕು ಅಂದಾಗ ಮಾತ್ರ ಜನಸಂಖ್ಯೆ ನಿಯಂತ್ರಣ ಸಾಧ್ಯವಾಗುತ್ತದೆ ಎಂದು ಹೇಳಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ॥ ಬಸವರಾಜ ಹುಬ್ಬಳಿ ಅವರು ಮಾತನಾಡಿ, ದೇಶದಲ್ಲಿ ಪ್ರತಿ ವರ್ಷ 1 ಕೋಟಿ 55 ಲಕ್ಷ ಜನಸಂಖ್ಯೆ ಹೆಚ್ಚಾಗುತ್ತಿದೆ. ಕರ್ನಾಟಕದಲ್ಲಿ ಪ್ರತಿ ವರ್ಷ 7 ಲಕ್ಷ 75 ಸಾವಿರದಷ್ಟು ಜನಸಂಖ್ಯೆ ಹೆಚ್ಚವರಿಯಾಗುತ್ತಿದೆ. ಈ ವೇಗದಲ್ಲಿ ಜನಸಂಖ್ಯೆಯು ಬೆಳೆಯುತ್ತಿದ್ದರೆ ಭಾರತವು ಮುಂದಿನ 35 ವರ್ಷಗಳಲ್ಲಿ 200 ಕೋಟಿಗೂ ಹೆಚ್ಚು ಜನಸಂಖ್ಯೆಯನ್ನು ಹೊಂದಲಿದೆ. ಈ ನಿಟ್ಟಿನಲ್ಲಿ ಆರೋಗ್ಯ ಇಲಾಖೆಯಿಂದ ಸೂಕ್ತ ಜಾಗೃತಿ ಮೂಡಿಸಲು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತಿಳುವಳಿಕೆ ಮೂಡಿಸಲಾಗುತ್ತಿದೆ ಎಂದು ಹೇಳಿದರು.

ಜನಜಾಗೃತಿ ರ್‍ಯಾಲಿಯು ಸಿದ್ದೇಶ್ವರ ದೇವಸ್ಥಾನದಿಂದ ಗಾಂಧಿ ಚೌಕ ಮಾರ್ಗವಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯಕ್ಕೆ ಬಂದು ಕಾರ್ಯಕ್ರಮ ಮುಕ್ತಾಯವಾಯಿತು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ॥ ರಾಜೇಶ್ವರಿ ಗೊಲಗೇರಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ॥ ಕವಿತಾ ದೊಡ್ಡಮನಿ, ಜಿಲ್ಲಾ ಕುಷ್ಟರೋಗ ನಿರ್ಮೂಲನಾ ಅಧಿಕಾರಿ ಡಾ॥ ಸಂಪತ್ತ ಗುಣಾರಿ, ತಾಲೂಕಾ ಆರೋಗ್ಯ ಅಧಿಕಾರಿ ಡಾ॥ ಪರಶುರಾಮ ಹಿಟ್ನಳ್ಳಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಜಿ ಎಮ್ ಕೊಲೂರ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಸುರೇಶ ಹೊಸಮನಿ, ಶ್ರೀಮತಿ ರೇಖಾ ದಶವಂತ, ಸರ್ಕಾರಿ ನರ್ಸಿಂಗ್ ಕಾಲೇಜ ಬೋಧಕರು ಮತ್ತು ವಿವಿಧ ನರ್ಸಿಂಗ್ ಕಾಲೇಜಗಳ ಉಪನ್ಯಾಸಕರು ಹಾಗೂ ಇಲಾಖೆಯ ಅಧಿಕಾರಿಗಳು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿಯವರು ಉಪಸ್ಥಿತರಿದ್ದರು. ತಾಲೂಕಾ ಆರೋಗ್ಯ ಶಿಕ್ಷಣಾಧಿಕಾರಿ ಎನ್. ಆರ್ ಬಾಗವಾನ ವಂದಿಸಿದರು.

## ರೈತರ ಕಬ್ಬಿನ ಬಿಲ್ ಬಾಕಿ ಉಳಿಸಿಕೊಂಡ ಸಕ್ಕರೆ ಕಾರ್ಖಾನೆಗಳು

# ಸಕ್ಕರೆ ಕಾರ್ಖಾನೆ ಚರ–ಸ್ಥಿರಾಸ್ಥಿ ಹರಾಜಿಗೆ ಮೌಲ್ಯಮಾಪನ ಸಮಿತಿ ರಚನೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ರೈತರಿಂದ ಕಬ್ಬನ್ನು ಪಡೆದುಕೊಂಡು ಕಬ್ಬಿನ ಬಿಲ್ ಪಾವತಿ ಮಾಡದೇ ಬಾಕಿ ಉಳಿಸಿಕೊಂಡ ಬಬಲೇಶ್ವರ ತಾಲೂಕಿನ ಕಾರಜೋಳ ಬಸವೇಶ್ವರ ಶುಗರ್ಶ್ ಸಕ್ಕರೆ ಕಾರ್ಖಾನೆಯ ಚರ–ಸ್ಥಿರಾಸ್ಥಿಗಳನ್ನು ಹರಾಜು ಹಾಕಿ ರೈತರ ಬಾಕಿ ಹಣ ಪಾವತಿ ಮಾಡಲು ಸಕ್ಕರೆ ಕಾರ್ಖಾನೆಯನ್ನು ಪರಿಶೀಲಿಸಿ ಮೌಲ್ಯಮಾಪನ ಮಾಡಲು ವಿಜಯಪುರ ವಿಭಾಗಾಧಿಕಾರಿಗಳ ನೇತೃತ್ವದಲ್ಲಿ 10 ಅಧಿಕಾರಿಗಳನ್ನೊಳಗೊಂಡ ತಂಡವನ್ನು ರಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ತಿಳಿಸಿದ್ದಾರೆ.

ಬಬಲೇಶ್ವರ ತಾಲೂಕಿನ ಬಸವೇಶ್ವರ ಶುಗರ್ಸ್ ಕಾರಜೋಳ ಸಕ್ಕರೆ ಕಾರ್ಖಾನೆಯವರು ಕಳೆದ ಸಾಲಿನ 2023–24ನೇ ಕಬ್ಬು ನುರಿಸುವ ಹಂಗಾಮಿಗೆ ಸಂಬಂಧಿಸಿದಂತೆ ರೈತರಿಂದ ಕಬ್ಬನ್ನು ಪಡೆದು, ನುರಿಸಿ ಇನ್ನೂ 48.00 ಕೋಟಿ ರೂ. ಹಣವನ್ನು ರೈತರಿಗೆ ಪಾವತಿ ಬಾಕಿ ಉಳಿಸಿಕೊಂಡಿದ್ದ–ರಿಂದ ಸಕ್ಕರೆ (ನಿಯಂತ್ರಣ) ಆದೇಶ 1966ರ ಮತ್ತು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಪ್ರಕಾರ ಜಿಲ್ಲಾಧಿಕಾರಿಗಳ ವರದಿ ಮೇರೆಗೆ ಬಾಕಿ ವಸೂಲಾತಿ ಮಾಡಲು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಬೆಂಗಳೂರು ಇವರು ಆದೇಶ ಹೊರಡಿಸಿದ್ದರು.



ಆದೇಶಾನುಸಾರ ಶ್ರೀ ಬಸವೇಶ್ವರ ಶುಗರ್ಸ್ ಕಾರಜೋಳ ಸಕ್ಕರೆ ಕಾರ್ಖಾನೆಗೆ ಸಂಬಂಧಿಸಿದ ಆಸ್ತಿಗಳ ಭೂ ದಾಖಲೆಗಳಲ್ಲಿ ರೈತರಿಗೆ ನೀಡಬೇಕಾಗಿರುವ ಬಾಕಿ ಹಣದ ಕುರಿತು ಬೋಜಾ ದಾಖಲಿಸಲು ಬಬಲೇಶ್ವರ ತಹಶೀಲ್ದಾರರಿಗೆ ಸೂಚಿಲಾಗಿತ್ತು. ಸೂಚನೆಯನುಸಾರ ತಹಶೀಲ್ದಾರರು ಸಕ್ಕರೆ ಕಾರ್ಖಾನೆಯ ದಾಖಲೆಗಳಲ್ಲಿ ಬೋಜಾ ನಮೂದಿಸಿದ್ದಾರೆ. ಅದ್ಯಾಗ್ಯೂ ಸಹ ಸದರಿ ಕಾರ್ಖಾನೆಯವರು ರೈತರಿಗೆ ಬಾಕಿ ಹಣವನ್ನು ಸಂದಾಯ ಮಾಡದೇ ಇರುವುದರಿಂದ ಮೌಲ್ಯಮಾಪನ ಸಮಿತಿ ರಚಿಸಲಾಗಿದ್ದು, ಸದರಿ ತಂಡ ನೀಡುವ ಮೌಲ್ಯಮಾಪನ ವರದಿಯನ್ವಯ ಹರಾಜು ಪ್ರಕ್ರಿಯೆಯನ್ನು ಕೈಗೊಂಡು ರೈತರ ಬಾಕಿ ಹಣವನ್ನು ಸಂದಾಯ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದ್ದಾರೆ.

# ದ್ರಾಕ್ಷಿ ಬೆಳೆ: ಹವಾಮಾನ ಆಧಾರಿತ ಬೆಳೆ ವಿಮೆಯಡಿ ನೊಂದಾಯಿಸಲು ಆಹ್ವಾನ

**ಉದಯರಶ್ಮಿ ನ್ಯೂಸ್**

ವಿಜಯಪುರ: ಪ್ರಸಕ್ತ 2024–25 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ವಿಜಯಪುರ ಜಿಲ್ಲೆಗೆ ದ್ರಾಕ್ಷಿ ಬೆಳೆಗೆ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯನ್ನು (RW-BCIS) ಅನುಷ್ಠಾನಗೊಳಿಸಲು ಅಧಿಸೂಚಿಸಲಾಗಿದೆ. ಬೆಳೆ ಸಾಲ ಪಡೆದ ರೈತರುಹಾಗೂ ಬೆಳೆ ಸಾಲ ಪಡೆಯದೆ ಇರುವ ರೈತರು ತಮ್ಮ ಆಧಾರ ಕಾರ್ಡ ಝರಾಕ್ಸ, ಪಹಣಿ ಪತ್ರಿಕೆ ಹಾಗೂ ಬ್ಯಾಂಕ್ ಪಾಸ್‌ಬುಕ್ ಪ್ರತಿಯೊಂದಿಗೆ ಹತ್ತಿರದ ಬ್ಯಾಂಕುಗಳಲ್ಲಿ ಅಥವಾ ಗ್ರಾಮ ಒನ್ ಕೇಂದ್ರ ಅಥವಾ ಸಿಎಸ್‌ಸಿ ಸೆಂಟರ್‌ಗಳಲ್ಲಿ ವಿಮಾ ಯೋಜನೆಯಡಿ ನೊಂದಾಯಿಸಿಕೊಳ್ಳಲು ಕೋರಿದೆ.

ದ್ರಾಕ್ಷಿ ಬೆಳೆಗೆ ವಿಮೆ ನೊಂದಾಯಿಸಿಕೊಳ್ಳಲು ಕೊನೆಯ ದಿನಾಂಕ: 15–07–2024, ರೈತರು ಪಾವತಿಸಬೇಕಾದ ವಿಮಾ ಕಂತಿನ ಮೊತ್ತ ರೂ. 14,000 ರೂ.ಗಳಾಗಿರುತ್ತದೆ. ರೈತರು ಕಡ್ಡಾಯವಾಗಿ ಎಫ್‌ಐಡಿ, ಹಾಗೂ ಎನ್‌ಪಿಸಿಐ ಸಿಡಿಂಗ್ ಮಾಡಿಸಿರಬೇಕು.

ಹೆಚ್ಚಿನ ಮಾಹಿತಿಗಾಗಿ ತೋಟಗಾರಿಕೆ ಇಲಾಖೆ, ರೈತ ಸಂಪರ್ಕ ಕೇಂದ್ರದ ಅಧಿಕಾರಿ ಹಾಗೂ ಹತ್ತಿರದ ಬ್ಯಾಂಕ್ ಶಾಖೆ, ಅಗ್ರಿಕಲ್ಚರ ಇನ್ಸುರನ್ಸ ಕಂಪನಿ ವಿಮಾ ಸಂಸ್ಥೆಯ ಪ್ರತಿನಿಧಿ ಮೊಬೈಲ್ ನಂ: 8899887873, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ವಿಜಯಪುರ – 9535185999, ಹಿರಿಯ ಸಹಾಯಕ ತೋಟಗಾ–ರಿಕೆ ನಿರ್ದೇಶಕರು ಇಂಡಿ – 9008404041, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಸಿಂದಗಿ– 8197464675, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಬ.ಬಾಗೇವಾಡಿ – 9845215362, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಮುದ್ದೇಬಿಹಾಳ – 8123686903 ಇವರನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

# "ಆದದ್ದೆಲ್ಲ ಒಳಿತೇ ಆಯಿತು"

**ಉದಯರಶ್ಮಿ ದಿನಪತ್ರಿಕೆ**

ಪುರಂದರ ದಾಸರ ಅಂತರಂಗ ನಿವೇದನೆಯ ಮೊದಲ ಸಾಲು "ಆದದ್ದೆಲ್ಲ ಒಳಿತೇ ಆಯಿತು"

ಇದು ಅಂತರಂಗದ ಉತ್ಕೃಷ್ಟ ಭಾವ ಮತ್ತು ಜೀವನವನ್ನು ತಾತ್ವಿಕತೆಯೊಂದಿಗೆ ಧನಾತ್ಮಕವಾಗಿ ಪ್ರೇರೇಪಿಸಿಕೊಳ್ಳುವ , ಆಧ್ಯಾತ್ಮಿಕವಾಗಿ ಸಂಧಾನಿಸುವ ಧೈನ್ಯತೆಯನ್ನು ವಿಷದಪಡಿಸುತ್ತದೆ.



## ಭಾವರಶ್ಮಿ

–ನಂದಿನಿ ಧರ್ಮರಾಜ್

("ನಮ್ಮ ಕಥಾ ಅರಮನೆ" ಬರಹಗಾರರು)

**ಉದಯರಶ್ಮಿ ದಿನಪತ್ರಿಕೆ**

ಕಲಿಯುಗದ ವಾಸ್ತವದ ಪ್ರಪಂಚದಲ್ಲಿ ಎಲ್ಲಾ ಮಾನವರೂ.... ಇದೊಂದು ಸಂಪದ್ಭರಿತ ಪ್ರಜ್ಞೆಯನ್ನು ಅಂತರ್ಗತ ಮಾಡಿಕೊಂಡರೆ, ಕ್ಷುಲ್ಲಕ ಕಾರಣಗಳಿಗೆ, ಆಕಸ್ಮಿಕ ವಿಘಟನೆಗಳಿಗೆ, ಅನಿರೀಕ್ಷಿತ ತಿರುವುಗಳಿಗೆ, ಮನನೊಂದು ಆಗುವ ಜೀವಹಾನಿಗಳಿಗೆ, ತಮ್ಮ ಮುಂದಿನ ನಿರ್ಧಾರಗಳಿಗೆ ಸೂಚನಾಫಲಕವಿದ್ದಂತೆ.

ಮನಸ್ಸಿಗೆ ಸಮಾಧಾನ ಮತ್ತು ಹೊಸ ಆಲೋಚನೆಗಳಿಗೆ ದಾ–ರಿದೀಪವಾಗುತ್ತದೆ.

ಸಮಾನಾಂತರವಾಗಿ ಚಿಂತನಕಾರರ ನುಡಿಯೊಂದು ಮಸ್ತಕವನ್ನು ಸ್ಪರ್ಶಿಸಿತು.

ಬದುಕಿರುವುದು ಕೇವಲ ಮೂರೇ ದಿನ

" ನಿನ್ನೆ, ಇಂದು, ಮತ್ತು ನಾಳೆ"

ಎಂತಾ ಅದ್ಭುತ ನುಡಿಯಲ್ಲವೆ.....

ನಿನ್ನೆ ಸಂಭವಿಸಿದ್ದು ಒಳ್ಳೆಯದೆ(ನನ್ನ ನೋಟ, ಆಲೋಚನೆ,ತೊಡಗಿಸಿಕೊಳ್ಳುವಿಕೆ ಸರಿಯಿದ್ದರೆ ಮಾತ್ರ)


ನಿನ್ನೆಯ ಅನುಭವದ ಮೇಲೆ ಇಂದಿನ ಅಂಕಣದಲ್ಲಿ ಸಂಭವಿಸಿದ್ದೂ ಒಳ್ಳೆಯದೆ ,(ನಿನ್ನೆಯ ಸಂಘರ್ಷಗಳನ್ನು ಇಂದೂ ಹೊತ್ತಿದ್ದರೆ ಅಸಾಧ್ಯ)

ಇಂದಿನ ದಿನ,ಸಂತೃಪ್ತಿಯೊಂದಿಗೆ ಆರಾಮದಾಯಕ ನಿದ್ರೆ ಹೊಂದಿದ್ದರೆ ,ನಾಳೆಯ ಬೆಳಗಿನ ಮುದ್ರೆಯು ಸದೃಢವಾಗಿ ಆರಂಭವಾಗುತ್ತದೆ.....

ನಿನ್ನೆಯ ಧನಾತ್ಮಕ ಚಿಂತನೆ, ಈ ದಿನವನ್ನು,ಈ ದಿನದ ಕಾರ್ಯಗಳು ಇಂದು ಮತ್ತು ನಾಳೆಯ ಮನಸ್ಥಿತಿಯನ್ನು ಸಲಹುತ್ತವೆ.

ಪ್ರಕೃತಿಯ ಒಳಿತು, ಕೆಡುಕುಗಳ ದರ್ಶನ ನಮ್ಮ ಅವಲೋಕನದಲ್ಲೇ.. ಇದೆ.

ಕಾಮಾಲೆ ಕಣ್ಣಿಗೆ ಕಾಣುವುದೆಲ್ಲ ಹಳದಿಯೆಂಬಂತೆ, ಋಣಾತ್ಮಕತೆಯೇ .... ತಪ್ಪುಗಳನ್ನೇ ಎತ್ತಿ ಹಿಡಿಯುವ ಮನಸ್ಥಿತಿಯವರಿಗೆ ಜಗದಲ್ಲಿ ಒಳ್ಳೆಯತನಕ್ಕೆ ಜಾಗವೇ ಇಲ್ಲ ಎಂಬ ಹಣೆಬರಹವನ್ನು ಹಾಕಿಕೊಂಡು ಇತರರಿಗೆ ಅದೇ ಹಿಂಬರಹವನ್ನು ನೀಡಿಬಿಟ್ಟಿರುತ್ತಾರೆ.ಧನಾತ್ಮಕತೆಯ ಸರ್ಶಕೆ ಆಹಾನವೇ ಇರುವುದಿಲ.



ಸಧೃಡ ಶರೀರದೊಳಗೆ ಸದೃಢ ಮನಸ್ಸಿದ್ದರೆ ಯಾವುದೇ ಕಾರ್ಪಣ್ಯಗಳನ್ನು ಎದುರಿಸಿ, ಅದೊಂದು ಜೀವನಾನುಭವವೆಂದು ಭಾವಿಸಿ, ತಮ್ಮ ಬತ್ತಳಿಕೆಯಲ್ಲಿ ಇರಿಸಿ, ಸಂದರ್ಭಾನುಸಾರ ಮುಂದಿನ ಯೋಜನೆಗಳಿಗೆ ಸಂಸ್ಕರಿಸಿ ಶೇಖ–ರಿಸಿದ ಪಾಠವಾಗಿಸಬಹುದು.

ನಮ್ಮ ಸುತ್ತಮುತ್ತಲ ಆಗುಹೋಗುಗಳನ್ನು ಗಮನಿಸಿದಾಗ,ಅತೀ ವೇಗದ ಶ್ರೀಮಂತಿಕೆ, ಕಡಿಮೆ ಅವಧಿಯಲ್ಲಿ ದಿಢೀರ್ ಯಶಸ್ಸನ್ನು ಗಳಿಸುವ ಸಲುವಾಗಿ ತಾಳ್ಮೆಯಿಂದ ಅವಲೋಕಿಸಿ ಸಾಗದೆ, ಸಾಧನೆಯೆಂಬ ಕಿರೀಟವನ್ನು ಹಗಲು ಕನಸಿನ ಕುದುರೆಯ ಮೇಲೆ ಕುಳಿತು ಧ–ರಿಸಿಬಿಡುತ್ತಾರೆ.......,.. ಆ ಕುದುರೆಗೆ ಲಾಳ ಕಟ್ಟಲಾಗಿದೆಯೇ.... ತಳಪಾಯ ಭದ್ರವಾಗಿದೆಯೆ ಎಂಬುದನ್ನು ಅರಿಯದೇ.....


ನಂತರದ ಸೋಲುಗಳಿಗೆ ಅವ–ರವರನ್ನೋ..... ಸನ್ನಿವೇಶವನ್ನೋ.... ಕೆಲವೊಮ್ಮೆ ಪರಿಹಾಸ್ಯವೆಂದರೆ, ನಿರ್ಜೀವ ವಸ್ತುಗಳನ್ನು ಕಾರಣವಾಗಿಸಿಬಿಡುತ್ತಾರೆ.

ಆದರೆ ಆತ್ಮಾವಲೋಕನ ಮುಖ್ಯ, ಅವೆಲ್ಲವೂ.... ನಮ್ಮಿಂದಲೇ ನಿರ್ವಹಿಸಲ್ಪಟ್ಟಿರುತ್ತವೆ.

ಅರೆ ಕ್ಷಣ ವಿವೇಚಿಸಿ, ಬಿಡು.. ಆಗಿದ್ದೆಲ್ಲಾ ಒಳಿತೇ ಆಯಿತು....

ಮುಂದಿನ ದೊಡ್ಡ ಅವಘಡಗಳಿಗೆ ಎಚ್ಚೆತ್ತುಕೊಂಡೆ, ಮುಂದೆ ಯೋಚಿಸಿ,ಯೋಜಿಸಿ ನಡೆಯೋಣ ಎಂಬ ಪ್ರಬುದ್ಧ ನಿರ್ಧಾರ ಯಶಸ್ವಿಗೆ ದಾರಿಯನ್ನು ತಾನೇ ತೆರೆಯುತ್ತದೆ.

ಅತಿಯಾಗಿ ನಂಬಿದ ವ್ಯಕ್ತಿಗಳಿಂದಲೂ ಮೋಸ ಅಥವಾ



ನಂಬಿಕೆ ದ್ರೋಹವಾಯಿತೆಂದರೆ, ಚಿಂತಿಸುವ ಬದಲು ಆದ–'ದ್ದೆಲ್ಲಾ ಒಳಿತಾಗಿಯೆ ಇರಬಹುದೆಂದು ಭಾವಿಸಿ,ಅವರ ಜೊತೆಗಿನ ನಮ್ಮ ಭಾವನಾತ್ಮಕ ಪಯಣವನ್ನು ಮೊಟಕುಗೊಳಿಸಿ , ಎಚ್ಚರಿಕೆಯಿಂದಿರಲು ಕಲಿತ ಪಾಠವೆಂದುಕೊಳ್ಳುವುದು ಉಚಿತ,

ಬಹುಶಃ ಜೀವನದ ಎಷ್ಟೋ ಸಂದರ್ಭಗಳಲ್ಲಿ ಈ ರೀತಿಯ ಘಟನೆಗಳು,ಅಪ ಪ್ರಚಾರ ಮತ್ತು ಬೆನ್ನಿಗೆ ಚೂರಿ ಹಾಕುವಂತಹ ಅತಿದೊಡ್ಡ ಅವಘಡಗಳನ್ನು ತಡೆದಿರುತ್ತವೆ.

ಈಗಿನ ಯುವಪೀಳಿಗೆ ಮತ್ತು ಮಕ್ಕಳಿಗೆ ಆದ್ಯತೆಯ ಬೇರಾಗಿ ಈ ಸಮಾಧಾನ ಚಿತ್ತ ಸತ್ಯವನ್ನು ಉಣಬಡಿಬೇಕಾಗಿದೆ.

ಅಂದಿನ ದಾಸ ಶ್ರೇಷ್ಠರ ,ಸಂತರು ಸಾರಿದ ಜೀವನ ತತ್ವಗಳನ್ನು ಅಳವಡಿಸಿಕೊಳ್ಳಲು ಮಾರ್ಗದರ್ಶಿಸಬೇಕಿದೆ.

ಇನ್ನೂ ಮುಂದೆ ಸಾಗಿ,...

ಸಮಾಜದ ಕಟ್ಟಕಡೆಯ ವ್ಯಕ್ತಿ ಏನೂ ಇಲ್ಲದೆ ಎಲ್ಲವನ್ನೂ ಗಳಿಸಿರುವ.....

ಚಿನ್ನದ ತಣಿಗೆಯಲ್ಲಿ ಊಟ ಮಾಡುವ ಸ್ಥಿತಿವಂತಿಕೆ ಇದ್ದರೂ... ಅಲೌಕಿಕ ಬದುಕ ಅರಸಿ ಪರಿತ್ಯಾಗಿಯಾಗಿರುವವರ, ಜೀವನದ ಹಿನ್ನೋಟವನ್ನು ಪರಿವೀಕ್ಷಿಸಬೇಕಾಗುತ್ತದೆ. ಇವರೆಲ್ಲರ ಗುರಿ ವಿಭಿನ್ನವಾದರೂ ಅವರು ಬಂದದ್ದೆಲ್ಲವನ್ನು ಸ್ವೀಕ–ರಿಸುದರ ರೀತಿ "ಆದದ್ದೆಲ್ಲಾ ಒಳಿತೇ ಆಯಿತು"ಎಂಬ ತಮೋಗುಣದ ಹೂರಣ.

ನೂರಾರು ಪ್ರಾಣಗಳ ಭಕ್ಷಿಸಿದ ಕಳಿಂಗ ಯುದ್ಧ ಭೀಭತ್ಸ ಐತಿಹಾಸಿಕ ಘಟನೆಯಾದರೂ ,ಈ ಯುದ್ಧದ ಸಾವು,ನೋವು,ಸಂಕಟ, ಒಬ್ಬ ಸಾಮ್ರಾಟನ ಮನ ಪರಿವರ್ತನೆಗೆ ಕಾರಣವಾಯಿತು.ಶಾಂತಿಯನ್ನು



ಅರಸಿ ,ಬೌದ್ಧ ಬಿಕ್ಕುವಾಗಿ ಬುದ್ಧನ ತತ್ವಗಳನ್ನು ದೇಶ ವಿದೇಶಗಳಲ್ಲಿ ಸಾರಿದ ಮಹಾನ್ ಬೌದ್ಧ ಧರ್ಮದ ಪೋಷಕನಾದ ಸಾಮ್ರಾಟ ಅಶೋಕ.

ಕಳಿಂಗದ ರಕ್ತಪಾತ ನೋವುಂಟುಮಾಡಿದರೂ... ಅದರಿಂದುಟಾದ ಅಶೋಕನ ಹೃದಯಪಲ್ಲಟ ಕೈಯಲ್ಲಿ ಖಡ್ಗವಿಡಿದವನಿಗೆ , ಶಾಂತಿಯ ಕವಚವನ್ನು ತೊಡಿಸಿತು.ಮುಂದೆ ಸಾಮ್ರಾಟನಾಗಿ ಆಗಬಹುದಾದ ಕಾಳಗಗಳನ್ನುತಡೆದು, ಅಹಿಂಸೆಯ ಕಾಮಗಾರಿಗೆ ಚಾಲನೆ ನೀಡಿತು.

ಕುಟುಂಬದಲ್ಲಿಯೂ ಸಹ ಅನೇಕ ಕಷ್ಟ ನಷ್ಟಗಳನ್ನು ಅನುಭವಿಸಿದರೂ... ಒಳ್ಳೆಯದಾಗುವುದು ಎಂಬ ಓಜಸ್ಸು ಪೂರ್ಣ ಭಾವ ,ಹಿರಿಯರ ತತ್ವ ಪೂರ್ಣ ನುಡಿಗಳು ಆತ್ಮಸಂಧಾನವನ್ನು ಮಾಡುತ್ತವೆ.

ಮನೆಯಲ್ಲಿ ಹಸುವಿದ್ದರೆ ಹಾಲು ಕರೆ,ಹುಲ್ಲುಹಾಕು, ಪ್ರೀತಿಯಿಂದ ಸಾಕು..

ಹಸು ಇಲ್ಲವೇ ಬೇಸರಿಸಬೇಡ ಸಗಣಿ ತುಂಬುವುದು,ಬೆರಣಿ ತಟ್ಟುವುದು ತಪ್ಪುತ್ತದೆ ಎಂದು ಭಾವಿಸು

ಎಂಬ ಸಂದರ್ಭೋಚಿತ ಸಮಾಧಾನದ ನಿಟ್ಟುಸಿರು ಆಗಿದ್ದೆಲ್ಲಾ ಒಳಿತೇ ಆಯಿತು ಎಂಬ ಕೀರ್ತನೆಗೆ ಆಡು ಮಾತಿನ ಸ್ಪಂದನ ವಾಗಿದೆ.

ಒಳಿತೆಂಬುದು ಆತ್ಮವ ಹೊಕ್ಕರೆ,

ನಡೆ ನುಡಿಗಳಲ್ಲಿ ಬೆರೆತರೆ,ನಾವು ಕೊಡುವುದು ಒಳಿತು, ನಾವು ಪಡೆಯುವುದು ಒಳಿತು, ದಿನದ ಬಾಳದು ಅಮೃತದ ಸವಿಯಾಗುವುದಲ್ಲವೆ ಸಹೃದಯರೇ

# ಸೊಳ್ಳೆಗಳ ನಿಯಂತ್ರಣಕ್ಕಾಗಿ ಅಗತ್ಯ ಕ್ರಮವಹಿಸಿ :ತಹಶೀಲ್ದಾರ ಸಿಂದಗಿ



**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ಡೆಂಗ್ಯೂ, ಚಿಕನ್‌ಗುನ್ಯಾ ರೋಗಗಳು ಸೊಳ್ಳೆಗಳಿಂದ ಹರಡುವ ರೋಗಗಳಾಗಿದ್ದು, ಸೊಳ್ಳೆಗಳ ನಿಯಂತ್ರಣಕ್ಕಾಗಿ ಆರೋಗ್ಯ ಇಲಾಖೆ, ತಾಲ್ಲೂಕು ಹಾಗೂ ಸ್ಥಳೀಯ ಆಡಳಿತ ಅಗತ್ಯವಾದ ಕ್ರಮವಹಿಸಬೇಕು ಎಂದು ತಹಶೀಲ್ದಾರ ಪ್ರಕಾಶ ಸಿಂದಗಿ ಹೇಳಿದರು.

ಪಟ್ಟಣದ ಪ್ರವಾಸಿಮಂದಿರದಲ್ಲಿ ಗುರುವಾರ ಜರುಗಿದ ಡೆಂಗ್ಯೂ, ಚಿಕನ್‌ಗುನ್ಯಾ ಸೇರಿದಂತೆ ಮಳೆಗಾಲದಲ್ಲಿ ಹರಡುವ ರೋಗಗಳ ಕುರಿತು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕು-ರಿತಾದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪಟ್ಟಣದ ಎಲ್ಲ ವಾರ್ಡಗಳಲ್ಲಿ ಸೊಳ್ಳೆ ನಿಯಂತ್ರಣಕ್ಕಾಗಿ ಈಗಾಗಲೇ ಫಾಗಿಂಗ್ ಆರಂಭಿಸಲಾಗಿದೆ. ಜೊತೆಗೆ ಮಳೆನೀರು ಒಂದೆಡೇ ಸಂಗ್ರಹವಾಗದಂತೆ ಕ್ರಮವಹಿಸಲಾಗುತ್ತಿದೆ. ಜೊತೆಗೆ ಸಾರ್ವಜನಿಕರಿಗೆ ಈ ರೋಗಗಳ ಕುರಿತು ಸೂಕ್ತ ಮಾಹಿತಿ ಒದಗಿಸಿ ಎಚ್ಚರಿಕೆ ವಹಿಸಲು ಮುಂದಾಗುವಂತೆ ಆರೋಗ್ಯ ಇಲಾಖೆ ಹಾಗೂ ಸ್ಥಳೀಯ ಆಡಳಿತ ಸಿಬ್ಬಂದಿಗೆ ಸೂಚಿಸಿದರು.

ತಾಲ್ಲೂಕು ಪಂಚಾಯಿತಿ ಇಓ ಭಾರತಿ ಚೆಲುವಯ್ಯ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಶಬ್ಬೀರ್ ರೇವೂರಕರ್, ಸಿಎಚ್‌ಓ ಸಚೀನ ಪಾಟೀಲ ಮಾತನಾಡಿ, ಡೆಂಗ್ಯೂ, ಚಿಕನ್‌ಗುನ್ಯಾ ಹರಡುವ ಬಗೆ, ನಿಯಂತ್ರಣಕ್ಕಾಗಿ ಕೈಗೊಳ್ಳಬೇಕಾದ ಕ್ರಮಗಳು, ಬಳಕೆಯಿಲ್ಲದ ಟಾಯರ್, ತೆಂಗಿನಚಿಪ್ಪುಗಳಲ್ಲಿ ನೀರು ನಿಲ್ಲದಂತೆ ಎಚ್ಚರಿಕೆ ವಹಿಸುವುದು. ರೋಗಗಳಿಗೆ ದೊರೆಯುವ ಅಗತ್ಯ ಚಿಕಿತ್ಸೆಗಳ ಕುರಿತು ಮಾಹಿತಿ ನೀಡಿದರು.

ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ(ನರೇಗಾ) ಶಾಂತಗೌಡ ನ್ಯಾಮಣ್ಣವರ, ಪಟ್ಟಣ ಪಂಚಾಯಿತಿ ಕಿರಿಯ ಆರೋಗ್ಯ ನಿರೀಕ್ಷಕ ಫಿರೋಜ್ ಮುಲ್ಲಾ, ಕಂದಾಯ ನಿರೀಕ್ಷಕ ಸಂಗಮೇಶ ಗ್ವಾಳೇದ, ಪಟ್ಟಣ ಪಂಚಾಯಿತಿ ಸದಸ್ಯ ಕಾಶೀನಾಥ ಬಜಂತ್ರಿ, ಸೋಮು ದೇವೂರ, ಮಲ್ಲಿಕಾರ್ಜುನ ಜಡಿಮಠ, ಪ್ರಕಾಶ ಮಲ್ಲಾರಿ, ಬಸವರಾಜ ದೇವಣಗಾಂವ ಇದ್ದರು.

# ಜು.13 ರಂದು ಡಾ.ಬಾಬು ಜಗಜೀವನರಾಮ್ ಭವನ ಉದ್ಘಾಟನೆ

**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ಇದೇ ದಿ:13 ರಂದು ಶನಿವಾರ ಹಸಿರುಕ್ರಾಂತಿಯ ಹರಿಕಾರ, ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನರಾಮ್ ಸ್ಮರಣಾರ್ಥ ಬೆಂಗಳೂರಿನಲ್ಲಿ ಭವನ ಮತ್ತು ಸಂಶೋಧನೆ, ತರಬೇತಿ ಕೇಂದ್ರ ಉದ್ಘಾಟನೆಗೊಳ್ಳಲಿದೆ ಎಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಸಾಯಿಕುಮಾರ ಬಿಸನಾಳ ತಿಳಿಸಿದ್ದಾರೆ.

ಪಟ್ಟಣದಲ್ಲಿ ಗುರುವಾರ ಈ ಕುರಿತು ಪತ್ರಿಕೆಯೊಂದಿಗೆ ಮಾತನಾಡಿ, ಶೋಷಿತರ ಬಾಳಿನಲ್ಲಿ ಬೆಳಕು ಹರಿಸಿದ ಮುತ್ಸದ್ದಿ ಬಾಬು ಜಗಜೀವನರಾಮ್ ಸ್ಮರಣಾರ್ಥ-ರ್ ನಿರ್ಮಿಸಲಾಗಿರುವ ಭವನದ ಉದ್ಘಾಟನೆ ಬೆಂಗಳೂರಿನ ಮಾಗಡಿ ರಸ್ತೆಯ ಸುಮನಹಳ್ಳಿ ಸರ್ಕಲ್‌ನಲ್ಲಿಯ ನಿರಾಶ್ರೀತರ ಪರಿಹಾರ ಕೇಂದ್ರದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯನವ-ರಿಂದ ಮಧ್ಯಾನ್ಹ 3 ಗಂಟೆಗೆ ನೆರವೇರಲಿದೆ. ಈ ಸಂದರ್ಭದಲ್ಲಿ ಲೋಕಸಭೆಯ ಮಾಜಿ ಸ್ಪೀಕರ್ ಮೀರಾಕುಮಾರ, ಸಮಾಜಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ಸೇರಿದಂತೆ ಪಕ್ಷದ ಪ್ರಮುಖರು ಭಾಗವಹಿಸಲಿದ್ದಾರೆ.



ಕಾರ್ಯಕ್ರಮದಲ್ಲಿ ಜಿಲ್ಲೆಯಿಂದ ಭಾಗವಹಿಸಲು ಅನುಕೂಲವಾಗುವಂತೆ ಸಮಾಜ-ಕಲ್ಯಾಣ ಇಲಾಖೆಯಿಂದ 2 ಬಸ್‌ಗಳ ವ್ಯವಸ್ಥೆ ಮಾಡಲಾಗಿದ್ದು, ಜಿಲ್ಲೆಯ ಪ್ರತಿ ತಾಲ್ಲೂಕಿನಿಂದ 10 ಜನರಿಗೆ ಭಾಗವಹಿಸಲು ಅವಕಾಶವಿದೆ ಎಂದು ಮಾಹಿತಿ ನೀಡಿದರು.

ಜಿಲ್ಲಾ ಕಾಂಗ್ರೆಸ್ ಮುಖಂಡ ಸುಭಾಸ್ ಯಡಹಳ್ಳಿ, ರಮೇಶ ಗುಬ್ಬೇವಾಡ, ಸಂಜು ಕಲ್ಯಾಣಿ, ಸದಾಶಿವ ಪೂಜಾರಿ, ವಿಠ್ಠಲ್ ಸಂದಿಮನಿ, ಧರ್ಮು ಹೊಸೂರ ಇದ್ದರು.

# ವಚನ ಕಮ್ಮಟ ಪರೀಕ್ಷೆ: ನಿಂಗನಗೌಡ ರಾಜ್ಯಕ್ಕೆ ಪ್ರಥಮ

**ಉದಯರಶ್ಮಿ ನ್ಯೂಸ್**

ಸಿಂದಗಿ: ಚಿತ್ರದುರ್ಗದ ಮುರುಘರಾಜೇಂದ್ರ ಬೃಹನ್ಮಠ ನಡೆಸಿಕೊಡುವ ವಚನ ಕಮ್ಮಟ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಸಿಂದಗಿಯ ಎಚ್.ಜಿ.ಪದವಿ ಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿ ನಿಂಗನಗೌಡ ಕರ್ನಾಳ ಹಾಗೂ ಮಾರ್ಗದರ್ಶಕರಾದ ಉಪನ್ಯಾಸಕಿ ಮುಕ್ತಾಯಕ್ಕ ಕತ್ತಿ ಅವರಿಗೆ ಮಹಾವಿದ್ಯಾಲಯದ ಪರವಾಗಿ ಸನ್ಮಾನಿಸಿ ಗೌರವಿಸಲಾಯಿತು.



ವಿದ್ಯಾರ್ಥಿಯ ಈ ಸಾಧನೆಗೆ ಮತ್ತು ಮಾರ್ಗದರ್ಶನ ನೀಡಿದ ಉಪನ್ಯಾಸಕಿ ಮುಕ್ತಾಯಕ್ಕ ಕತ್ತಿ ಅವರಿಗೆ ಸಂಸ್ಥೆಯ ಅಧ್ಯಕ್ಷ ಹಾಗೂ ಶಾಸಕ ಅಶೋಕ ಮನಗೂಳಿ, ಸಂಸ್ಥೆಯ ನಿರ್ದೇಶಕ ಮಂಡಳಿ, ಮಹಾವಿದ್ಯಾಲಯ ಪ್ರಾಚಾರ್ಯ ಎ.ಆರ್.ಹೆಗ್ಗನದೊಡ್ಡಿ ಸೇರಿದಂತೆ ಮಹಾವಿದ್ಯಾಲಯದ ಬೋಧಕ ಬೋಧಕೇತರ ಸಿಬ್ಬಂದಿಯವರು ಅಭಿನಂದನೆ ಸಲ್ಲಿಸಿದ್ದಾರೆ.

ಈ ವೇಳೆ ಉಪನ್ಯಾಸಕರಾದ ಸಿದ್ದಲಿಂಗ ಕಿಣಗಿ, ಸತೀಶ ಬಸರಕೋಡ, ಎಫ್.ಎ.ಹಾಲಪ್ಪನವರ, ಡಾ.ಶಾಂತುಲಾಲ ಚವ್ಹಾಣ, ಆರ್.ವಾಯ್.ಪ-ರೀಟ, ಬಿ.ಎಸ್.ಬಿರಾದಾರ, ಆರ್.ಬಿ.ಹೊಸಮನಿ, ಎಸ್.ಪಿ.ಬಿರಾದಾರ, ಎಮ್.ಎನ್.ಅಜ್ಜಪ್ಪ ಸೇ-ರಿದಂತೆ ಅನೇಕರು ಇದ್ದರು.

## ಸಿಂದಗಿ ಜೆ.ಹೆಚ್.ಪಟೇಲ ಶಿಕ್ಷಣ ಮಹಾವಿದ್ಯಾಲಯದಲ್ಲಿ ವಿಶ್ವ ಜನಸಂಖ್ಯೆ ದಿನಾಚರಣೆ

# ಆರೋಗ್ಯ ಸೇವೆ ನಿರಂತರ ನೀಡುವುದು ಆರೋಗ್ಯ ಇಲಾಖೆ ಕರ್ತವ್ಯ

**ಉದಯರಶ್ಮಿ ನ್ಯೂಸ್**

ಸಿಂದಗಿ: ಸಂತಾನೋತ್ಪತ್ತಿ ಆರೋಗ್ಯ ಸೇವೆಗಳನ್ನು ಅರ್ಹ ಫಲಾನುಭವಿಗಳಿಗೆ ನಿರಂತರವಾಗಿ ನೀಡುವುದು ಇಲಾಖೆಯ ಆದ್ಯ ಕರ್ತವ್ಯ ಎಂದು ತಾಲೂಕಾ ಆರೋಗ್ಯ ಶಿಕ್ಷಣಾಧಿಕಾರಿ ಎಸ್.ಡಿ.ಕುಲಕರ್ಣಿ ಹೇಳಿದರು.



ಪಟ್ಟಣದ ಜೆ.ಹೆಚ್.ಪಟೇಲ ಶಿಕ್ಷಣ ಮಹಾವಿದ್ಯಾಲಯದ ಸಭಾಂಗಣದಲ್ಲಿ ವಿಜಯಪುರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಿಂದಗಿ ತಾಲೂಕ ಆರೋಗ್ಯ ಇಲಾಖೆ ಹಾಗೂ ಜೆ.ಹೆಚ್.ಪಟೇಲ್ ಶಿಕ್ಷಣ ಮಹಾವಿದ್ಯಾಲಯದ ಸಹಯೋಗದೊಂದಿಗೆ ಹಮ್ಮಿಕೊಂಡ ವಿಶ್ವ ಜನಸಂಖ್ಯೆ ದಿನಾಚರಣೆಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆರೋಗ್ಯ ಇಲಾಖೆಯ ಕುಟುಂಬ ಕಲ್ಯಾಣ ಯೋಜನೆಯಲ್ಲಿ ತಾತ್ಕಾಲಿಕ ವಿಧಾನಗಳಾದ ಗರ್ಭ ನಿರೋಧಕ ಮಾತ್ರೆಗಳ ಸೇವನೆ, ವಂಕಿಧಾರಣೆ, ನಿರೋಧ ಬಳಕೆಯಿಂದ ಬೇಗನೆ ಗರ್ಭಧರಿಸುವದನ್ನು ತಡೆಯಬಹುದು. ಒಂದು ಮತ್ತು ಎರಡನೇಯ ಮಗುವಿನ ಅಂತರ ಕಾಪಾಡಬಹುದು. ಶಾಶ್ವತ ವಿಧಾನಗಳಾದ ಉದರ ದರ್ಶಕ ಹಾಗೂ ಉದರ ಛೇದಕ ಶಸ್ತ್ರಚಿಕಿತ್ಸೆ, ಮತ್ತು ಪುರುಷರಿಗಾಗಿ ನೋಸ್ಕಾಲ್‌ಪೆಲ್ ವ್ಯಾಸಕ್ಟಮಿ ಶಸ್ತ್ರ ಚಿಕಿತ್ಸೆಯಿಂದ ಸಂತಾನ ನಿಯಂತ್ರಿಸಬಹುದು ಎಂದರು.

ಈ ವೇಳೆ ಪ್ರಾಚಾರ್ಯ ಡಾ.ಬಿ.ಎಮ್. ಹುರಕಡ್ಲಿ ಮಾತನಾಡಿ, ಆರೋಗ್ಯ ಇಲಾಖೆ ಕುಟುಂಬ ಕಲ್ಯಾಣದ ತಾತ್ಕಾಲಿಕ ಮತ್ತು ಶಾಶ್ವತ ಯೋಜನೆಗಳನ್ನು ಅಳವಡಿಸುವುದರ ಮೂಲಕ ಜನಸಂಖ್ಯೆಯನ್ನು ನಿಯಂತ್ರಿಸಬಹುದು. ಈ ಯೋಜನೆಗಳ ಮಹತ್ವವನ್ನು ಸಮುದಾಯದಲ್ಲಿ ಅರಿವು ಮೂಡಿಸಬೇಕು. ಜನಸಂಖ್ಯೆ ಸ್ಫೋಟದಿಂದ ಅನೇಕ ಸಮಸ್ಯೆಗಳು ಉದ್ಭವಿಸಿವೆ. ಮೂಲಭೂತ ಸೌಕರ್ಯಗಳ ಸಮಸ್ಯೆ, ವಸತಿ ಸಮಸ್ಯೆ, ಸಾರಿಗೆ ಸಮಸ್ಯೆ ಸೇರಿದಂತೆ ಅನೇಕ ಸಮಸ್ಯೆಗಳು ಉಂಟಾಗಿವೆ. ಮುಂದಿನ ಭಾವಿ ಶಿಕ್ಷಕರಾಗುವ ಪ್ರಶಿಕ್ಷಣಾರ್ಥಿಗಳು ಸಮುದಾಯದಲ್ಲಿ ಜನಸಂಖ್ಯೆ ನಿಯಂತ್ರಣ ಹಾಗೂ ಜನಸಂಖ್ಯೆ ಹೆಚ್ಚಳದಿಂದಾಗುವ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಬೇಕು ಸಲಹೆ ನೀಡಿದರು.

ಈ ವೇಳೆ ವೈದ್ಯಾಧಿಕಾರಿ ಡಾ.ಎ.ಎ.ಮಾಗಿ, ಸಿ.ಎಂ. ಮನಗೂಳಿ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ.ಅರವಿಂದ ಮನಗೂಳಿ, ಡಾ.ಮಹಾಂತೇಶ ಹಿರೇಮಠ ಮಾತನಾಡಿದರು. ಕಾಲೇಜಿನ ಪ್ರಶಿಕ್ಷಣಾರ್ಥಿಗಳಾದ ಅಕ್ಷತಾ ಒಕ್ಕಲಿ, ಸದ್ದಾಂ ಪುರದಾಳ ಜನಸಂಖ್ಯೆ ಸ್ಫೋಟದ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಎಸ್.ಎ.ಜಾಹಗೀರದಾರ, ಅಂಬರೀಷ್ ಬಿರಾದಾರ, ಬಿ.ಡಿಮಾಸ್ತಿ, ಪ್ರದೀಪ ಕತ್ತಿ, ಆರೋಗ್ಯ ಇಲಾಖೆಯ ಪ್ರಭು ಜಂಗಿನಮಠ, ಮಹಾಲಿಂಗ ಫಕೀರಪೂರ, ವೀರೇಂದ್ರ ಪವಾಡೆ, ಹೇಮಂತ ಕಲಾಲ, ಸಾಯಬಣ್ಣ ಗಣಜಲಿ, ಗೀತಾ ಸಾಸಬಾಳ ಸೇರಿದಂತೆ ಮಹಾವಿದ್ಯಾಲಯದ ಬೋಧಕ-ಬೋಧಕೇತರ ಸಿಬ್ಬಂದಿಗಳು, ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಹಾಗೂ ಪ್ರಶಿಕ್ಷಣಾರ್ಥಿಗಳು ಇದ್ದರು.

## ಛತ್ರಪತಿ ಶಿವಾಜಿ ಹಾಗೂ ಡಾ.ಬಿ.ಆರ್.ಅಂಬೇಡ್ಕರ ಪುತ್ಥಳಿ ತೆರವು ಖಂಡಿಸಿ ಬೃಹತ್ ಪ್ರತಿಭಟನೆ

# ಮೂಲ ಸ್ಥಳದಲ್ಲಿ ಪುನಃ ಪುತ್ಥಳಿ ಸ್ಥಾಪಿಸಲು ಪ್ರತಿಭಟನಾಕಾರರ ಆಗ್ರಹ

**ಉದಯರಶ್ಮಿ ನ್ಯೂಸ್**

ವಿಜಯಪುರ: ನವದೆಹಲಿಯ ಐತಿಹಾಸಿಕ ಹಳೆಯ ಸಂಸತ್ ಭವನದ ಮುಂದೆ ಇದ್ದ ಛತ್ರಪತಿ ಶಿವಾಜಿ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗಳನ್ನು ತೆರವುಗೊಳಿಸಿದ ಕೇಂದ್ರ ಸರ್ಕಾರದ ಕ್ರಮ ಅತ್ಯಂತ ಖಂಡನೀಯ ಎಂದು ಬುದ್ಧ, ಬಸವ, ಅಂಬೇಡ್ಕರ್ ಸೇವಾ ಸಂಸ್ಥೆಯ ಅಧ್ಯಕ್ಷ ತುಳಸಿರಾಮ ಹರಿಜನ ಹೇಳಿದರು.




ಅವರು ವಿಜಯಪುರ ನಗರದಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಸೇವಾ ಸಂಸ್ಥೆಯಿಂದ ಛತ್ರಪತಿ ಶಿವಾಜಿ ಮಹಾರಾಜರ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಇತರ ಮಹಾನ್ ನಾಯಕರ ಪುತ್ಥಳಿಗಳನ್ನು ಕೇಂದ್ರ ಸರ್ಕಾರ ತೆರವುಗೊಳಿಸಿರುವುದನ್ನು ಖಂಡಿಸಿ ಶ್ರೀ ಸಿದ್ಧೇಶ್ವರ ದೇವಸ್ಥಾನದಿಂದ ಜಿಲ್ಲಾಧಿಕಾರಿಗಳ ಕಛೇರಿಯವರೆಗೆ ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ಉದ್ದೇಶಿಸಿ ಮಾತನಾಡಿದರು.

ಭಾರತೀಯ ಚರಿತ್ರೆಯ ಪುಟದಲ್ಲಿ ಅಜರಾಮರವಾಗಿ ಉಳಿದ ವಿಶ್ವಮಾನ್ಯ ಅಮೂಲ್ಯ ರತ್ನಗಳೆಂದರೆ ಛತ್ರಪತಿ ಶಿವಾಜಿ ಮಹಾರಾಜರು ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರು. ಅಂತಹ ಮಹಾನ್ ನಾಯಕರಿಗೆ ಗೌರವ ಸಲ್ಲಿಸುವ ದ್ಯೋತಕವಾಗಿ ಹಿಂದಿನ ನಾಯಕರು ರಾಷ್ಟ್ರದ ಐತಿಹಾಸಿಕ ಸಂಸತ್ ಭವನದ ಮುಂದೆ ಪುತ್ಥಳಿಗಳನ್ನು ನಿರ್ಮಿಸಿ ಚರಿತ್ರೆಯ ಪುಟದಲ್ಲಿ ಅಚ್ಚಳಿಯದಂತೆ ನೋಡಿಕೊಂಡಿದ್ದರು. ಆದ-ರೆ ದೇಶದಲ್ಲಿರುವ ಈಗಿನ ಕೇಂದ್ರ ಸರ್ಕಾರ ಯಾವುದೇ ಸಕಾರಣವಿಲ್ಲದೇ ಏಕಾಏಕಿ ಪ್ರತಿಮೆಗಳನ್ನು ತೆರವುಗೊಳಿಸಿರುವ ಕ್ರಮ ವಿಶ್ವವ್ಯಾಪಿ ಇರುವ ಛತ್ರಪತಿ ಶಿವಾಜಿ ಮಹಾರಾಜರ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರ ಅಸಂಖ್ಯಾತ ಅನುಯಾಯಿಗಳಿಗೆ ಆಘಾತವನ್ನುಂಟು ಮಾಡಿದೆ. ಕೂಡಲೇ ರಾಷ್ಟ್ರಪತಿಗಳು ಹಳೆಯ ಸಂಸತ್ ಭವನದ ಮೂಲ ಸ್ಥಳದಲ್ಲಿ ಪುನಃ ಪ್ರತಿಷ್ಠಾಪಿಸುವ ಮೂಲಕ ಗೌರವ ಸಲ್ಲಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಪ್ರತಾಪ ಚಿಕ್ಕಲಕಿ, ಜಿತೇಂದ್ರ ಕಾಂಬಳೆ, ಮತೀನಕುಮಾರ ದೇವದರ, ವೈ.ಸಿ. ಮಯೂರ, ಭಾರತಿ ಹೊಸಮನಿ, ನಾಗೇಶ ತಳಕೇರಿ, ಪರಶುರಾಮ ಚಲವಾದಿ, ರಮೇಶ ಕವಲಗಿ, ಅಕ್ಷಯ ಅಜಮನಿ, ಬಸವಕುಮಾರ ಕಾಂಬಳೆ, ಗೋಪಿನಾಥ ಚಲವಾದಿ, ಪ್ರದೀಪ ಚಲವಾದಿಯವರು ಮಾತನಾಡಿ, ಹಳೆಯ ಸಂಸತ್ ಭವನದ ಮುಂದೆ ಪುನಃ ಪುತ್ಥಳಿಗಳನ್ನು ಪ್ರತಿಷ್ಠಾಪಿಸುವಂತೆ ಕೇಂದ್ರ ಸರ್ಕಾರಕ್ಕೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಂಜು ಮೇಲಿನಮನಿ, ರಘು ಕಣಮೇಶ್ವರ, ಮಲ್ಲು ಜಾಲಗೇರಿ, ವಿವೇಕ ಶಾಹಾಪೂರ, ವೆಂಕಟೇಶ ವಗ್ಯಾಣವರ, ಸಿದ್ದು ರಾಯಣ್ಣವರ, ಶಂಕರ ಚಲವಾದಿ, ಸಂಜು ಕಂಬಾಗಿ, ಆಕಾಶ ಕಲ್ಲವಗೋಳ, ಭಾಗ್ಯಶ್ರೀ ವಗ್ಯಾಣವರ, ಲಕ್ಷ್ಮಣ ಬಿರಾದಾರ, ಮಲ್ಲಿಕಾರ್ಜುನ ಪಾಟೀಲ, ಲಕ್ಷ್ಮಣ ಚಲವಾದಿ, ರೋಹಿತ ಮಲಕಣ್ಣವರ, ಮಂಜುನಾಥ ಶಿವಶರಣ, ರಮೇಶ ಕಾಂಬಳೆ, ಅಪ್ಪಾಸಾಬ ಬನಸೋಡೆ, ಮಲ್ಲು ಬನಸೊಡೆ, ವಿಕಾಸ ಹೊಸಮನಿ, ರುದ್ರು ಬನಸೋಡೆ, ಸಂತೋಷ ಟಕ್ಕೆ, ಶಿವು ಮೇಲಿನಮನಿ, ಶೇಖರ ಕೂಡಗಿ, ಚಂದ್ರು ನಾಗಠಾಣ, ಕೀರ್ತಿ ಕಾಖಂಡಕಿ, ವಿಶ್ವನಾಥ ತಾಳಿಕೋಟಿ, ಅರವಿಂದ ಕಾಖಂಡಕಿ, ಬಸವರಾಜ ಕುಬಕಡ್ಡಿ ಇತರೆ ಮುಖಂಡರು ಉಪಸ್ಥಿತರಿದ್ದರು.

# ರಾಜ್ಯಾಧ್ಯಕ್ಷರಾಗಿ ಚಿದಾನಂದ ಕಾಂಬಳೆ ಆಯ್ಕೆ

**ಉದಯರಶ್ಮಿ ನ್ಯೂಸ್**

ಇಂಡಿ: ಪಟ್ಟಣದ ಹೆಸ್ಕಾಂ ಇಲಾಖೆಯ ನೌಕರರಾಗಿ ಸೇವೆ ಸಲ್ಲಿಸುತ್ತಿರುವ ಚಿದಾನಂದ ಕಾಂಬಳೆ ಅವರು ಕರ್ನಾಟಕ ರಾಜ್ಯ ಛಲವಾದಿ ನೌಕರರ ಸಂಘದ ರಾಜ್ಯಾಧ್ಯಕ್ಷರಾಗಿ ನೇಮಕವಾಗಿದ್ದಾರೆ.

ಡಾ.ಅರವಿಂದ ಲಂಬು (ರಾಜ್ಯ ಹಿರಿಯ ಉಪಾಧ್ಯಕ್ಷ), ರವಿಕಾಂತ ಸಿ.ಎಂ(ರಾಜ್ಯ ಉಪಾಧ್ಯಕ್ಷ), ರಾಜೇಶ ಇಂಗಳಗಿ(ರಾಜ್ಯ ಪ್ರ.ಕಾರ್ಯದರ್ಶಿ), ಹಿರಗಪ್ಪ ಸಿಂಗ್ಯಾಗೋಳ(ರಾಜ್ಯ ಸಂಘಟನಾ ಕಾರ್ಯದರ್ಶಿ), ರವೀಂದ್ರ ಶಿವಯಗೊಳ, ದುರ್ಗಪ್ಪ ಛಲವಾದಿ(ಸಹ ಕಾರ್ಯದರ್ಶಿಗಳು), ಮೋಹನ ಗುನ್ನಾಪೂರ, ಡಾ.ಸುಜಾತಾ ಚಂಚಲಕರ(ರಾಜ್ಯ ಸಂಚಾಲಕರು), ಸುರೇಶ ದುಲಾರಿ(



ರಾಜ್ಯ ಖಜಾಂಚಿ), ಶಿವಾನಂದ ಕಟ್ಟಿಮನಿ, ಪುನಿತಕುಮಾರ ಪಿ, ಕುಮಾರ ಬಾಗೇವಾಡಿ, ರಮೇಶ ಫಿರಗಾ, ಆಂಜನಯ್ಯಸ್ವಾಮಿ ಹೊಸಮನಿ, ಪಿ.ಎಸ್.ಧರಣಾಕರ, ರವೀಂದ್ರ ಇರನೂರ, ಯುವರಾಜ ನಾಟೀಕಾರ, ಚಿಕ್ಕಪ್ಪ ಕಾಂಬಳೆ ರಾಜ್ಯ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

# ಸಾಧನೆಗೆ ಸ್ವಯಂ ಪ್ರೇರಣೆಯೇ ಮುನ್ನುಡಿ

**ಉದಯರಶ್ಮಿ ದಿನಪತ್ರಿಕೆ**

– ಸಂತೋಷ್ ರಾವ್ ಪೆರ್ಮುಡ, ಪೆರ್ಮುಡ ಮನೆ, ಪಟ್ರಮೆ ಗ್ರಾಮ ಮತ್ತು ಅಂಚೆ ಬೆಳ್ತಂಗಡಿ ತಾಲೂಕು,



ಪ್ರತಿಷ್ಠಿತ ಬಗಾನ್ ಫುಟ್‌ಬಾಲ್ ತಂಡದಲ್ಲಿ ಹೃದಯ್ ಎನ್ನುವ ಯುವಕನೊಬ್ಬ ಹೆಚ್ಚುವರಿ ಆಟಗಾರನಾಗಿ ಇದ್ದ. ಹೃದಯ್‌ನನ್ನು ತಂಡದ ಆಡಳಿತ ಮಂಡಳಿಯು ಹೃದಯ್‌ನ ಆಟವನ್ನು ಅಭ್ಯಾಸದ ಸಂದರ್ಭದಲ್ಲಿ ಆತನ ತಂದೆಯು ಮೈದಾನದ ಮೂಲೆಯಲ್ಲಿ ಕುಳಿತು ವೀಕ್ಷಿಸುತ್ತಾ ಇದ್ದರು. ಅದೊಂದು ದಿನ ಪ್ರಮುಖ ಪಂದ್ಯಾವಳಿ ಪ್ರಾರಂಭವಾಗಿ ಬಗಾನ್ ತಂಡವು ಅಭ್ಯಾಸ ಪಂದ್ಯಗಳಲ್ಲಿ ಆಡಿಸುತ್ತಿತ್ತೇ ವಿನಃ ಎಂದಿಗೂ ಪ್ರಮುಖ ಪಂದ್ಯಗಳ ಹನ್ನೊಂದು ಮಂದಿಯ ತಂಡದಲ್ಲಿ ಆಟವಾಡಿಸುತ್ತಾ ಇರಲಿಲ್ಲ, ಹೃದಯ್ ಎಂದಿಗೂ ತಾನು ಕೇವಲ ಮೀಸಲು ಆಟಗಾರ ಮತ್ತು ಅಭ್ಯಾಸ ಪಂದ್ಯಗಳ ಆಟಗಾರ ಎನ್ನುವ ಬೇಸರವಿಲ್ಲದೆ ಪ್ರತಿನಿತ್ಯವೂ ತಪ್ಪಿಸದೇ ಅಭ್ಯಾಸಕ್ಕೆ ಆಗಮಿಸುತ್ತಿದ್ದ.




ಎಲ್ಲಾ ಹಂತಗಳನ್ನೂ ದಾಟಿ ಉಪಾಂತ್ಯವನ್ನು ತಲುಪಿದಾಗಲೂ ಹೃದಯ್ ಆಡುವ ಬಳಗದಲ್ಲಿ ಎಲ್ಲೂ ಕಾಣಲೇ ಇಲ್ಲ. ಆದರೆ ತಂಡವು ಫೈನಲ್ ತಲುಪಿ ಪಂದ್ಯ ಇನ್ನೇನು ಪ್ರಾರಂಭ ಆಗಬೇಕು ಎನ್ನುವಾಗ ಹೃದಯ್ ಹಠಾತ್ತನೆ ತಂಡದ ತರಬೇತುದಾರನ ಬಳಿ ತೆರಳಿ, ಇದುವರೆಗೂ 'ನೀವು ನನ್ನನ್ನು ಹೆಚ್ಚುವರಿ ಆಟಗಾರನಾಗಿ ಬಳಸಿಕೊಂಡಿದ್ದೀರೇ ವಿನಃ ಯಾವ ಪಂದ್ಯದಲ್ಲೂ ನನಗೆ ಆಡಲು ಅವಕಾಶ ನೀಡಿಲ್ಲ. ದಯವಿಟ್ಟು ಇಂದಾದರೂ ನನಗೊಂದು ಅವಕಾಶವನ್ನು ನೀಡಿರಿ' ಎಂದು ಬೇಡಿಕೊಂಡ. ಆಗ ತರಬೇತುದಾರ, 'ನಿನಗಿಂತಲೂ ಅತ್ಯುತ್ತಮವಾಗಿ ಆಟವನ್ನು ಆಡುವ ಆಟಗಾರರು ನಮ್ಮ ತಂಡದಲ್ಲಿ ಇದ್ದಾರೆ, ಅದೂ ಅಲ್ಲದೇ ನೇರವಾಗಿ ಫೈನಲ್ ಪಂದ್ಯದಲ್ಲಿ ನಾನು ಅಷ್ಟೊಂದು ದೊಡ್ಡ ಪ್ರಮಾಣದ ರಿಸ್ಕ್ ತೆಗೆದುಕೊಳ್ಳಲು ಸಿದ್ಧನಿಲ್ಲ' ಎಂದು ಹೇಳಿದರು. ಆಗ ಹೃದಯ್, 'ನೀವು ದಯವಿಟ್ಟು ಹಾಗೆ ಹೇಳಬೇಡಿ, ನನಗೊಂದು ಅವಕಾಶವನ್ನು



ಕೊಟ್ಟು ನೋಡಿ; ನಿಮ್ಮ ನಿರೀಕ್ಷೆಗೂ ಮೀರಿದಂತಹ ಆಟವನ್ನು ಹಾಗೂ ಫಲಿತಾಂಶವನ್ನು ನಾನು ನಮ್ಮ ತಂಡಕ್ಕೆ ತಂದುಕೊಡುತ್ತೇನೆ' ಎಂದು ಅಂಗಲಾಚಿ ಬೇಡಿಕೊಂಡನು. ಹೃದಯ್‌ನ ಪರಿಪರಿಯಾದ ಮನವಿಗೆ ಒಪ್ಪಿದ ತರಬೇತುದಾರ 'ಸರಿ, ತಂಡದ ಪೂರ್ತಿ ಪ್ರತಿಷ್ಠೆಯನ್ನು ಇಂದು ಪಣಕ್ಕೆ ಇಟ್ಟು ನಿನ್ನನ್ನು ಆಡುವ ಬಳಗದ ಒಳಕ್ಕೆ ತೆಗೆದುಕೊಂಡು ನಿನ್ನನ್ನು ಆಡಿಸುತ್ತೇನೆ, ನನ್ನ ನಿರೀಕ್ಷೆಯನ್ನು ಹುಸಿಗೊಳಿಸಬೇಡ' ಎಂದು ಹೇಳಿದರು.

ಟ್ರೆಡಿಯಂಟ್ ಮತ್ತು ಬಗಾನ್ ನಡುವಿನ ಫೈನಲ್ ಪಂದ್ಯದ ಆಟವು ಪ್ರಾರಂಭವಾಗಿತ್ತು, ಸಹ ಆಟಗಾರರು ನೀಡಿದ ಪಾಸ್ ಮೂಲಕ ಚೆಂಡು ಹೃದಯ್‌ನ ನಿಯಂತ್ರಣಕ್ಕೆ ಬಂದಾಗಲೆಲ್ಲಾ ನಿಖರವಾಗಿ ಗೋಲ್ ಮೇಲೆ ಗೋಲನ್ನು ಬಾರಿಸಿದ. ಅಂಗಣದಲ್ಲಿನ ಆತನ ಆಟದ ಚಲನೆಯಲ್ಲಿ ಮತ್ತು ಮೈದಾನದ ತುಂಬಾ ಓಟದಲ್ಲಿ ಮಿಂಚಿನ ಪ್ರಖರತೆ ಮತ್ತು ಉತ್ಸಾಹವು ಎದ್ದು ಕಾಣುತ್ತಿತ್ತು. ಅಂದಿನ ಆ ಪಂದ್ಯದಲ್ಲಿ ಅಂತಿಮವಾಗಿ ಬಗಾನ್ ತಂಡವು ಟ್ರೆಡಿಯಂಟ್ ತಂಡದ ವಿರುದ್ಧ 20 ಗೋಲುಗಳ ಅಂತರದಿಂದ ಗೆದ್ದಿತು. ಅಂದಿನ ಅಮೋಘವಾದ ವಿಜಯಕ್ಕೆ ಹೃದಯ್ ಬಾರಿಸಿದ ನಿರಂತರ ಗೋಲ್‌ಗಳೇ ಪ್ರಮುಖ ಕಾರಣವಾಗಿ ಆತನೇ ಬೃಹತ್ ಗೆಲುವಿನ ಪ್ರಮುಖ ಕಾರಣಕರ್ತ ಆಗಿದ್ದ. ಹೃದಯ್‌ನ ಆಟವನ್ನು ಗಮನಿಸಿದ ತಂಡದ ತರಬೇತುದಾರ ಅತ್ಯಂತ ಖುಷಿಯಿಂದ 'ಹೃದಯ್, ನಿನ್ನ ಆಟವು ನಿಜಕ್ಕೂ ಅತ್ಯದ್ಭುತವಾಗಿ-ತ್ತು, ನಿನ್ನನ್ನು ಇಂದು ಒಂದು ವೇಳೆ ನಾನು ಆಡಿಸದೇ ಇದ್ದಿದ್ದರೆ ನನ್ನಿಂದ ಬಹುಶಃ ಬಹಳ ದೊಡ್ಡ ತಪ್ಪು ಆಗುತ್ತಿತ್ತು. ಇಂಥಹ ಒಂದು ಅಮೋಘವಾದ ಆಟ ನಿನ್ನಿಂದ ಹೇಗೆ ಸಾಧ್ಯವಾಯಿತು?' ಎಂದು ಹೃದಯ್‌ನನ್ನು ಪ್ರಶ್ನಿಸಿದರು.

ತರಬೇತುದಾರರ ಈ ಮಾತಿಗೆ ಹೃದಯ್ ಅತ್ಯಂತ ವಿನೀತನಾಗಿ, 'ನಾನು ಫೈನಲ್ ಪಂದ್ಯದ ಆಟ ಆಡುವುದನ್ನು ನನ್ನ ತಂದೆ ವೀಕ್ಷಿಸುತ್ತಾ ಇದ್ದರು' ಎಂದು ಹೇಳಿದ. ಆಗ ತರಬೇತುದಾರ ಪ್ರತಿ ದಿನವೂ ಅಭ್ಯಾಸ ಪಂದ್ಯಗಳನ್ನು ಆಡುವಾಗ ಹೃದಯ್‌ನ ತಂದೆ ಕುಳಿತುಕೊಳ್ಳುತ್ತಿದ್ದ ಸ್ಥಳದ ಕಡೆಗೆ ನೋಡುತ್ತಾ, 'ಅಲ್ಲಿ ನಿನ್ನ ತಂದೆ ಕಾಣಿಸುತ್ತಾ ಇಲ್ಲವಲ್ಲ?' ಎಂದರು. ಆಗ ಒಂದು ಕ್ಷಣ ಯೋಚಿಸಿದ ಹೃದಯ್‌ನ ಕಣ್ಣಂಚಲ್ಲಿ ಕಣ್ಣೀರು ಜಿನುಗಿ, 'ಸರ್, ನಿಮಗೆ ನಾನು ಒಂದು ವಿಚಾರವನ್ನು ಹೇಳಬೇಕಿದೆ, ನನ್ನ ತಂದೆಗೆ ಎರಡೂ ಕಣ್ಣುಗಳು ಕಾಣಿಸುತ್ತಿರಲಿಲ್ಲ; ಸುಮಾರು ಐದು ದಿನಗಳ ಹಿಂದೆ ಅವರು ತೀ-ರಿಕೊಂಡರು. ನಾನು ಮೊದಲ ಬಾರಿಗೆ ಪಂದ್ಯಾವಳಿಯಲ್ಲಿ ಆಟ ಆಡುವುದನ್ನು ಅವರು ಮೇಲಿಂದ ವೀಕ್ಷಿಸಿದರು' ಎನ್ನುತ್ತಾ ತನ್ನೆರಡೂ ಕಣ್ಣುಗಳನ್ನು ಒರೆಸಿಕೊಂಡ.




ಪ್ರತಿಯೊಬ್ಬರ ಸಾಧನೆಯ ಹಿಂದಿರುವ ಶಕ್ತಿ ಮತ್ತು ಮುನ್ನುಡಿಯೇ ಸ್ವಯಂ ಪ್ರೇರಣೆ. ಅದು ಎಲ್ಲೆಲ್ಲೋ ಇರುವುದಿಲ್ಲ, ಅಥವಾ ಪ್ರೇರಣೆಯನ್ನು ಇನ್ನು ಎಲ್ಲಿಂದಲೋ ಖರೀದಿಸಿ ತರಬೇಕಿಲ್ಲ. ಪ್ರೇರಣೆಯು ನಮ್ಮ ಒಳಗಡೆಯೇ ಅಡಗಿರುತ್ತದೆ ಮತ್ತು ಅದನ್ನು ಸಮರ್ಪಕವಾಗಿ ಹೊರತರುವ ಕೆಲಸವಷ್ಟೇ ಸರಿಯಾಗಿ ಆಗಬೇಕಿದೆ. ತನ್ನೊಳಗೆ ಇರುವ ಪ್ರೇರಣೆಯನ್ನು ಅಗತ್ಯ ಇದ್ದಾಗ ವ್ಯಕ್ತಿಯೊಬ್ಬ ಸರಿಯಾಗಿ ಬಳಸಿಕೊಳ್ಳುವುದೇ ಜಾಣತನ. ಕಷ್ಟಕರ ಸನ್ನಿವೇಶಗಳನ್ನು ಎದುರಿಸಿ ಅದರಿಂದ ಹೊರಬರಲು ಪ್ರತಿಯೊಬ್ಬರಿಗೂ ಪ್ರೇರಣೆಯು ಹೆಚ್ಚು ನೆರವಾಗುತ್ತದೆ. ಪ್ರತಿಯೊಬ್ಬರೂ ಸ್ವಯಂ ಪ್ರೇರಣೆಯಿಂದ ಕೆಲಸವನ್ನು ನಿರ್ವಹಿಸಿದರೆ ಅದು ಎಲ್ಲರ ಸಂತೋಷಕ್ಕೂ ಕಾರಣ ಆಗುತ್ತದೆ. ಸ್ವಯಂ ಪ್ರೇರಣೆಗೆ ಒಳಗಾಗುವ ವ್ಯಕ್ತಿಯು ವೀಣೆಯಂತೆ ಸದಾ ಸುಮಧುರವಾದ ನಾದವನ್ನು ಹೊರಹೊಮ್ಮಿಸುತ್ತಲೇ ಇರುತ್ತಾನೆ. ಸ್ವಯಂ ಪ್ರೇರಣೆಯ ಸಹಕಾರದಿಂದ ಜೀವನದ ಆಚೆಗೂ ಅಜರಾಮರರಾಗಿ ಉಳಿದ ಮಹಾನ್ ಸಾಧಕರು ಅನೇಕರಿದ್ದಾರೆ. ನಾವೂ ಸರ್ವಕಾಲಿಕ ಶ್ರೇಷ್ಠ ವ್ಯಕ್ತಿಗಳಾಗಲು ನೆರವನ್ನು ನೀಡುವ ಮತ್ತು ಬೆಳಕನ್ನು ನೀಡುವ ಪ್ರೇರಣೆಯನ್ನು ಸ್ವತಃ ಗಳಿಸಿಕೊಳ್ಳುವ ಪ್ರಯತ್ನವನ್ನು ನಿರಂತರವಾಗಿ ಮಾಡಿದಾಗ ಯಶಸ್ಸು ಕಟ್ಟಿಟ್ಟ ಬುತ್ತಿ.

# ಬದುಕಿನ ಸ್ವಾರ್ಥಕತೆಗೆ ಶರಣರ ತತ್ವಗಳನ್ನು ಅಳವಡಿಸಿ :ಯತಿಶ್ವರಾನಂದ ಶ್ರೀ

**ಉದಯರಶ್ಮಿ ನ್ಯೂಸ್**




ಇಂಡಿ: 12 ನೆಯ ಶತಮಾನದ ಶರಣರ ವಿಚಾರ ಧಾರೆಗಳನ್ನು ಅಂದಿನ ಅನುಭವ ಮಂಟಪ ಭಕ್ತ ಸಮುದಾಯಕ್ಕೆ ತಲುಪಿಸಿದಂತೆ ಅಥರ್ಗಾದ ಷಣ್ಮುಖಾರೂಢ, ಈರಯ್ಯ ಶ್ರೀಗಳು ಮತ್ತು ಶ್ರೇಷ್ಠ ಸಂತ ಶ್ರೀ ಸಿದ್ದೇಶ್ವರ ಶ್ರೀಗಳ ಚಿಂತನೆಗಳನ್ನು ಇಂದಿನ ಜನ ಸಮುದಾಯಕ್ಕೆ ಮುಟ್ಟಿಸುವ ಕಾರ್ಯ ಆಗಬೇಕು, ಜನ ಸಾಮಾನ್ಯರು ಬದುಕಿನ ಸ್ವಾರ್ಥಕತೆಗೆ ಶರಣರ ತತ್ವಗಳನ್ನು ಜೀವನದಲ್ಲಿ ಅಳವಡಿಸಬೇಕೆಂದು ಕಾಗವಾಡದ ಯತಿಶ್ವರಾನಂದ ಶ್ರೀಗಳು ಹೇಳಿದರು.

ಅವರು ತಾಲೂಕಿನ ಅಥರ್ಗಾ ಗ್ರಾಮದ ಶ್ರೀ ಷಣ್ಮುಖ ಶಿವಯೋಗಿಗಳ ಗುರುದೇವಾಶ್ರಮದಲ್ಲಿ ನಡೆದ ಗುರು ಆರಾಧನಾ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಗುರುದೇವಾಶ್ರಮದ ಈಶ ಪ್ರಸಾದ ಶ್ರೀಗಳು ಮಾತನಾಡಿ, 12 ನೆಯ ಶತಮಾನದಲ್ಲಿ ಶರಣಾಂದೋಲನ ಆದ್ಯ ಉದ್ದೇಶವೇ ವ್ಯಕ್ತಿಗತ ಪರಿವರ್ತನೆ, ವ್ಯಕ್ತಿ ಪರಿವರ್ತನೆ ಗೊಂಡರೆ ಸಹಜವಾಗಿ ಸಮುದಾಯ ಪರಿವರ್ತನೆ ಯಾಗುತ್ತದೆ. ಅಂತಹ ವ್ಯಕ್ತಿಗತ ಪರಿವರ್ತನೆಗೆ ಸಿದ್ದೇಶ್ವರ ಶ್ರೀಗಳು ತಮ್ಮ ಪ್ರವಚನದ ಮೂಲಕ ಒಂದು ಉಜ್ವಲ ನಿದರ್ಶನ. ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಕ್ತ ಸಮುದಾಯವೆಲ್ಲ ಸ್ವಾಭಾವಿಕವಾಗಿಯೇ ಸಿದ್ದೇಶ್ವರ ಶ್ರೀಗಳ ಪ್ರವಚನ ಅನುಸರಿಸಿದರು ಎಂದರು.

ತಿಕೋಟಾದ ಚೆನ್ನ ಮಲ್ಲಿಕಾರ್ಜುನ ಶ್ರೀಗಳು ಮಾತನಾಡಿ ಸಿದ್ದೇಶ್ವರ ಶ್ರೀಗಳ ಪ್ರವಚನದಲ್ಲಿ ಯಾವದೇ ಧರ್ಮ, ಪಂಥ ಅಥ–'ವಾ ಸಮುದಾಯ ಸಾಂಪ್ರದಾಯಿಕ ಆಚರಣೆ ಗಳಿಗೆ ಸಂಬಂದಿಸಿಲ್ಲ. ಅವರು ನೀಡಿದ ಪ್ರವಚನ ಮೂಲಕ ವಿಶ್ವಕ್ಕೆ ನೀಡಿದ ಅನನ್ಯ ಕೊಡುಗೆ ಸಂಬಧಿಸಿದ್ದು ಎಂದರು.

ಟಾಕಳಿಯ ಶಿವದೇವ ಶ್ರೀಗಳು ಮಾತನಾಡಿಸಿದ್ದೇಶ್ವರ ಶ್ರೀಗಳು ಪ್ರವಚನದ ಮೂಲಕ ಸಾಮಾಜಿಕ ಕಾರ್ಯಗಳ ತತ್ವದ ತಳಹದಿಯ ಮೇಲೆ ಹೊಸದೊಂದು ಸಮಾಜ ಕಟ್ಟಲು ಶ್ರಮಿಸಿದವರು. ಶರಣ ಸಮುದಾಯದಲ್ಲಿ ಎದ್ದು ಕಾಣುವ ಸಿದ್ದೇಶ್ವರ ಶ್ರೀಗಳು ತನ್ನ ಶ್ರಮದಿಂದ ಚಿಂತನೆಯಿಂದ ಸಂಘಟನಾ ಶಕ್ತಿಯಿಂದ ಬದುಕಿರುವಾಗಲೇ ದಂತ ಕಥೆಯಾದರು ಎಂದರು.

ಶಿವಪ್ರಸಾದ ಶ್ರೀಗಳು ಹಿರೇಪಡಸಲಗಿ, ಚಿಂಚಲಿಯ ಸಿದ್ದ ಪ್ರಸಾದ ಶ್ರೀಗಳು ಮಾತನಾಡಿ, ಸಿದ್ದೇಶ್ವರರು ಪ್ರವಚನ ಕುರಿತಂತೆ ಸಾಹಿತ್ಯಿಕ, ಸಾಂಸ್ಕೃತಿಕ ಸಾಮಾಜಿಕ, ಧಾರ್ಮಿಕ ಹೀಗೆ ಹತ್ತು ಹಲವಾರು ಆಯಾಮಗಳಲ್ಲಿ ಪ್ರವಚನಗಳಲ್ಲಿ ಚಿಂತನೆ ಮಾಡುತ್ತಿದ್ದರು ಎಂದರು.

ಷಡಕ್ಷರಿ ಶ್ರೀಗಳು ವಿಜಯಪುರ, ಯೋಗಾನಂದ ಶ್ರೀಗಳು ಚಡಚಣ, ಶಿವಲಿಂಗ ಶ್ರೀಗಳು ಚಡಚಣ ಮಾತನಾಡಿ ಅಥರ್ಗಾ ಗ್ರಾಮದಲ್ಲಿ ಸಿದ್ದೇಶ್ವರ ಶ್ರೀಗಳ ಕುರಿತು 108 ದಿನಗಳ ವರೆಗೆ ನಡೆದ ಚಿಂತನೆ ಕುರಿತು ಪ್ರಶಂಸಿಸಿದರು.

ಶಿಕ್ಷಕ ಸಿ.ಎಸ್.ಮೇತ್ರಿ ಸ್ವಾಗತಿಸಿ ನಿರೂಪಿಸಿದರು.

# ಮುದ್ದೇಬಿಹಾಳ ಪೊಲೀಸರ ಸಾಹಸ: ಕಳ್ಳರು & ರೂ.3.5 ಲಕ್ಷ ವಶಕ್ಕೆ

**ಉದಯರಶ್ಮಿ ನ್ಯೂಸ್**



ಮುದ್ದೇಬಿಹಾಳ: ಕಳೆದ ಕೆಲವು ದಿನಗಳ ಹಿಂದೆ ಪಟ್ಟಣದ ಹುಡ್ಕೋ ಗೇಟ್ ಬಳಿ ದ್ವಿಚಕ್ರ ವಾಹನದಲ್ಲಿದ್ದ ಹಣವನ್ನು ಕಳ್ಳತನ ಮಾಡಿದ್ದ ಕಳ್ಳರನ್ನು ಬಂಧಿಸುವಲ್ಲಿ ಇಲ್ಲಿನ ಪೊಲೀಸರು ಯಶಸ್ವಿಯಾಗಿದ್ದಾರೆ.

ಇಲ್ಲಿನ ಹುಡ್ಕೋದಲ್ಲಿರುವ ಕರ್ನಾಟಕ ಬ್ಯಾಂಕ್ ನಿಂದ 3.60 ಲಕ್ಷ ಹಣವನ್ನು ಡ್ರಾ ಮಾಡಿಕೊಂಡು ಬೈಕ್ ನ ಹಿಂಬದಿ ಬ್ಯಾಗನಲ್ಲಿಟ್ಟು ಹುಡ್ಕೋ ಗೇಟ್ ಬಳಿ ಎಳೆನೀರು ಖರೀದಿಸುವಷ್ಟರಲ್ಲಿ ಖದೀಮರು ಹಣವನ್ನು ಎಗರಿಸಿದ್ದರು. ಈ ಬಗ್ಗೆ ಇಲ್ಲಿನ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು ಕಳ್ಳರನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಭದ್ರಾವತಿಯವರಾದ ಶಂಕರ ಆಚಾರ್ಯ ಮತ್ತು ಸಂಜು ಹೊಸಮನಿ ಆರೋಪಿತರಿದ್ದು ಇವರಿಂದ ಮುದ್ದೇಬಿಹಾಳ, ನಿಡಗುಂದಿ, ತಾಳಿಕೋಟೆ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಪ್ರಕರಣಗಳ ಪೈಕಿ ಒಟ್ಟು 3.5 ಲಕ್ಷ ರೂ ಗಳನ್ನ ವಶಕ್ಕೆ ಪಡೆದುಕೊಳ್ಳಲಾಗಿದೆ.

ಕಳ್ಳರನ್ನು ಬಂಧಿಸುವಲ್ಲಿ ಯಶಸ್ವಿಯಾದ ಡಿವಾಯ್ಎಸ್‌ಪಿ ಬಲ್ಲಪ್ಪ ನಂದಗಾವಿ, ಸಿಪಿಐ ಮಲ್ಲಿಕಾರ್ಜುನ ತುಳಸಿಗೇರಿ, ಪಿಎಸ್ಐ ಸಂಜಯ ತಿಪರೆಡ್ಡಿ, ಕ್ರೈಂ ಪಿಎಸ್ಐ ಆರ್.ಎಲ್.ಮನ್ನಾಬಾಯಿ, ಸಿಬ್ಬಂದಿಗಳಾದ ಬಿ.ಕೆ.ಗುಡಿಮನಿ, ಆರ್.ಎಸ್.ಪಾಟೀಲ, ವಿ.ಎನ್.ಹಾಲಗಂಗಾಧರಮಠ, ಆರ್.ಎಸ್.ಮದರಿ, ಎಸ್.ಎಲ್.ಹತ್ತರಕಿಹಾಳ, ಎಸ್.ಸಿ.ರೆಡ್ಡಿ ಇವರನ್ನ ಶ್ಲಾಘಿಸಿದ ಎಸ್‌ಪಿ ಪ್ರಶಂಸನಾ ಪತ್ರದೊಂದಿಗೆ ನಗದು ಬಹುಮಾನವನ್ನು ಘೋಷಿಸಿದ್ದಾರೆ.

# ಜನಸಂಖ್ಯೆ ಹೆಚ್ಚಳ ಅಭಿವೃದ್ಧಿಗೆ ಮಾರಕ :ಸಂತೋಷ ಬಂಡೆ

**ಉದಯರಶ್ಮಿ ನ್ಯೂಸ್**




ಇಂಡಿ: ಜನಸಂಖ್ಯೆ ಹೆಚ್ಚಳದಿಂದ ಮೂಲ ಸೌಲಭ್ಯಗಳ ಕೆಣಟಿಜಜ–ಜುಟಿಜಜರತೆ, ಶಿಕ್ಷಣ–ಆರೋಗ್ಯ–ನೈರ್ಮಲ್ಯ ಸೇವೆಗಳ ಅಲಭ್ಯತೆ, ಅಪೌಷ್ಟಿಕತೆ, ನಿರುದ್ಯೋಗದಂತಹ ಸಮಸ್ಯೆಗಳನ್ನು ಎದು–ರಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಪ್ರಜ್ಞಾವಂತರು ಜಾಗೃತಿ ಮೂಡಿಸಲು ವ್ಯಾಪಕವಾಗಿ ಶ್ರಮಿಸಬೇಕೆಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ತಾಲೂಕಿನ ಹಿರೇರೂಗಿ ಗ್ರಾಮದ ಯುಬಿಎಸ್ ಶಾಲೆಯಲ್ಲಿ ವಿಶ್ವ ಜನಸಂಖ್ಯಾ ದಿನದ ನಿಮಿತ್ತ ಹಮ್ಮಿಕೊಂಡ 'ಜನಸಂಖ್ಯೆ ನಿಯಂತ್ರಣದಲ್ಲಿ ಶಿಕ್ಷಣದ ಪಾತ್ರ' ಕುರಿತ ಚರ್ಚಾಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದರು.

ಬಡತನ ಮತ್ತು ಜನಸಂಖ್ಯೆಯ ನಡುವೆ ನೇರ ಸಂಬಂಧವಿದೆ. ಶಿಕ್ಷಣದಿಂದ ಜನರ ಜೀವನಮಟ್ಟ ಹೆಚ್ಚಿಸಿ, ಮಿತ ಸಂತಾನದ ಅರಿವನ್ನು ತೀವ್ರಗೊಳಿಸಬೇಕಾಗಿದೆ ಎಂದು ಹೇಳಿದರು.

ದೇಶದಲ್ಲಿ 1951ರಲ್ಲಿ ಕೇವಲ 36 ಕೋಟಿ ಇದ್ದ ಜನಸಂಖ್ಯೆ 2011ರಲ್ಲಿ 121 ಕೋಟಿ ಆಗಿದೆ. ಪ್ರತಿ ವರ್ಷ 1.81 ಕೋಟಿ ಜನ ಸೇರ್ಪಡೆಯಾಗುತ್ತಿದ್ದಾರೆ. ರಾಜ್ಯದಲ್ಲಿ 1951ರಲ್ಲಿ 1.94 ಕೋಟಿ ಇದ್ದ ಜನಸಂಖ್ಯೆ 2011ರಲ್ಲಿ 6.11 ಕೋಟಿಯಾಗಿದೆ. ಪ್ರತಿ ವರ್ಷ 8.40 ಲಕ್ಷ ಜನ ಹೆಚ್ಚಾಗಿ ಸೇರ್ಪಡೆಯಾಗುತ್ತಿದ್ದಾರೆ. ಇದೇ ವೇಗದಲ್ಲಿ ಜನಸಂಖ್ಯೆ ಬೆಳೆದರೆ ಬಡತನ, ಅನಕ್ಷರತೆ, ಅಜ್ಞಾನ, ಅನಾರೋಗ್ಯ, ಅತ್ಯಾಚಾರ, ಅಸುರಕ್ಷಿತ ಜೀವನ ಶೈಲಿ ಹೆಚ್ಚಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಶಿಕ್ಷಕ ಎಸ್ ಎಸ್ ಅರಬ ಮಾತನಾಡಿ, ವಿಜ್ಞಾನ, ತಂತ್ರಜ್ಞಾನದಲ್ಲಿ ನಾವು ಕ್ರಾಂತಿ ಮಾಡಿದರೂ, ಜನಸಂಖ್ಯೆ ನಿರೀಕ್ಷಿತ ಮಟ್ಟದಲ್ಲಿ ನಿಯಂತ್ರಣಕ್ಕೆ ಬರುತ್ತಿಲ್ಲ. ಪ್ರಜ್ಞಾವಂತರು ವ್ಯವಸ್ಥಿತ ಮತ್ತು ಸುಖಿ ಸಮಾಜದ ಚಿತ್ರಣ ನೀಡಿ ಜನಸಂಖ್ಯೆ ಹೆಚ್ಚಳ ತಡೆಯಲು ಕೈಜೋಡಿಸಬೇಕು ಎಂದು ಕೋ–ರಿದರು.

ಮುಖ್ಯ ಶಿಕ್ಷಕ ಎ ಎಂ ಬೆದ್ರೇಕರ ಅಧ್ಯಕ್ಷತೆ ವಹಿಸಿ, ಮಾತನಾಡಿದರು. ಶಿಕ್ಷಕಿ ಎನ್ ಬಿ ಚೌಧರಿ ಸ್ವಾಗತಿಸಿ, ನಿರೂಪಿಸಿದರು. ಎಸ್ ಪಿ ಪೂಜಾರಿ ವಂದಿಸಿದರು.

ತೈಸಿನ್ ನದಾಫ್ ಸೇರಿದಂತೆ ಮಕ್ಕಳು ಉಪಸ್ಥಿತರಿದ್ದರು.

## ನಿವೃತ್ತಗೊಂಡ ನೆಚ್ಚಿನ ಶಿಕ್ಷಕ ಬಸವರಾಜ ಅನಂತಪುರ ಗುರುವಿಗೆ ಕಲ್ಪವೃಕ್ಷ ಕಾಣಿಕೆ

# ಪರಿಸರ ಪ್ರೇಮ ಮೆರೆದ ಶಾಲಾ ಬಾಲೆಯರು

**ಉದಯರಶ್ಮಿ ನ್ಯೂಸ್**



ಚಿಕ್ಕಪಡಸಲಗಿ (ಜಮಖಂಡಿ): ತಮ್ಮ ಅಚ್ಚುಮೆಚ್ಚಿನ ಗುರುಯೊಬ್ಬರು ಸೇವಾ ನಿವೃತ್ತಿ ಹೊಂದಿದರು. ತನ್ನಿಮಿತ್ಯ ಈ ಶುಭ' ಹಾರೈಕೆಯ ಸುಘಳಿಗೆಯಲ್ಲಿ ಹಲವಾರು ಹಿತೈಷಿಗಳು, ಶಾಲಾ ಮಕ್ಕಳು ಗುರುದೇವೋಭವನ ಗುಣಗಾನದೊಂದಿಗೆ ಸಂಪ್ರೀತಿಯ ಕಾಣಿಗಳನ್ನು ಸಮರ್ಪಿಸಿ ಧನ್ಯತಾಭಾವ ಮೆರೆದರು. ಆದರೆ ಕೆಲ ಬಾಲೆಯರು ತಮ್ಮ ಪ್ರೀತಿ ಪಾತ್ರ ಆ ಗುರುವಿಗೆ ವಿಭಿನ್ನ ಸವಿನೆನಪಿನ ಕಾಣಿಕೆಯೊಂದನ್ನು ನೀಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿ ಗಮನ ಸೆಳೆದರು.

ಹೌದು! ನಿಷ್ಕಲ್ಮಶ ಭಾವದ ಆ ಗುರುಜಿಗೆ ಶಾಲಾ ಬಾಲೆಯರು ನೀಡಿದ ಕಾಣಿಕೆ ಅಂತಿಂಥ ಕಾಣಿಕೆಯಲ್ಲ ! ಅದು ಪರಿಸರ ಕಾಳಜಿಯುತ ಕಳಕಳಿಯ ಕಾಣಿಕೆ. ಗುರುಜಿಯವರ ವಿಶ್ರಾಂತ ಜೀವನವು ಕಲ್ಪವೃಕ್ಷದಂತೆ ಅರಳಲಿ. ಸವಿಸಿಹಿ ಭಾವ ಬಂಧನ ಗಟ್ಟಿಗೊಳ್ಳಲಿ. ಔದಾರ್ಯ ಗುಣದ ಪ್ರೀತಿಭರಿತ ಪುಷ್ಪರಸ ಇನ್ನೂ ಶಿಷ್ಯವೃಂದಕ್ಕೆ ಲಭಿಸಲಿ ಎನ್ನುವ ಉದಾತ್ತ ಚಿಂತನೆ ಸಿಂಚನದೊಂದಿಗೆ ಸವಿನೆನಪಿಗಾಗಿ ಕಲ್ಪವೃಕ್ಷದ ಸಸಿ ನೀಡಿ ಮಹೋನ್ನತ ಪರಿಸರ ಸ್ನೇಹಕ್ಕೆ ಮುಂದಾದರು. ತಮ್ಮ ಅಂತರಂಗದಲ್ಲಿ ಮೊಳಕೆಯೊಡೆದಿದ್ದ ಹಸಿರಿನ ಹಸಿವು ಗುರುವಿಗೆ ಕಲ್ಪವೃಕ್ಷ ಸಸಿ ನೀಡುವ ಮೂಲಕ ನೀಗಿಸಿಕೊಂಡು ಹಸಿರೆಲೆಯ ಚಿಗುರಕ್ಕೆ ನಾಂದಿಯಾದರು, ಮಾದ–ರಿಯಾದರು, ಸಾಕ್ಷಿಯಾದರು !

ಇದು ಕೃಷ್ಣೆಯ ಸೆರಗಿನಲ್ಲಿರುವ ಪುಟ್ಟ ಗ್ರಾಮವೊಂದರಲ್ಲಿ ಕಂಡು ಬಂದ ದೃಶ್ಯ ! ಜಮಖಂಡಿ ತಾಲ್ಲೂಕಿನ ಚಿಕ್ಕಪಡಸಲಗಿ ಗ್ರಾಮದಲ್ಲಿರುವ ಗದುಗಿನ ತೋಂಟದಾರ್ಯ ವಿದ್ಯಾಪೀಠ ಸಂಸ್ಥೆಯ ಶಿವಶರಣ ಹರಳಯ್ಯ ಸ್ಮಾರಕ ಪ್ರೌಢಶಾಲೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಾಗಿ ಬಸವರಾಜ ಅನಂತಪುರ ಅವರು ಸುದೀರ್ಘ 39 ವರ್ಷಗಳ ಕಾಲ ಅತ್ಯಂತ ಶಿಸ್ತು ಬದ್ಧ ವೃತ್ತಿ ಕಾಯಕ ಗೈದಿದ್ದಾರೆ. ಸೇವಾ ಪಯಣದಲ್ಲಿ ಎಲ್ಲರ ಪ್ರೀತಿ, ವಿಶ್ವಾಸ ಪಡೆದು ಮೆಚ್ಚುಗೆ ಸಂಪಾದಿಸಿ ಈಚೆಗೆ ಸೇವಾ ವಯೋನಿವೃತ್ತಿ ಹೊಂದಿದ್ದ ಪ್ರಯುಕ್ತ ಶಾಲಾ ಬಾಲೆಯರು ಕಲ್ಪವೃಕ್ಷದ ಸಸ್ಯಯೊಂದನ್ನು ತಮ್ಮ ಪ್ರೀತಿ ಪಾತ್ರ ಗುರುವಿಗೆ ಕಾಣಿಕೆಯಾಗಿ ನೀಡಿಲ್ಲದೇ ಗುರುವಿನ ಅಮೃತಹಸ್ತದಿಂದಲೇ ಅವರ ಸವಿನೆನಪಿಗಾಗಿ ಶಾಲಾವರಣದಲ್ಲಿ ಕಲ್ಪವೃಕ್ಷ ಟೆಂಗಿನ ಸಸಿ ನೆಡಿಸಿ ಜನ್ಯವಾದ ಧನ್ಯತಾಭಾವ ತೋ–ರಿದ್ದಾರೆ. ಬಾಲೆಯರು ಕಾಣಿಕೆ ರೂಪದಲ್ಲಿ ಕೊಡಮಾಡಿದ ಆ ಚಿಗುರೆಲೆಯ ಕಲ್ಪವೃಕ್ಷ ಸಸಿ ಅನಂತಪುರ ಗುರುಜಿ ಸಂತಸದಿಂದ ನೆಟ್ಟು,ನೀರುಣಿಸಿ ಮಕ್ಕಳೊಂದಿಗೆ ಖುಷಿ ಹಂಚಿಕೊಂಡರು.

ವ್ಯಕ್ತಿ ಆದರ್ಶ – ಪರಿಸರ ಸ್ನೇಹಕ್ಕೆ ಈ ಬಾಲೆಯರ ಭಾವಲೋಕದ ಕ್ರಿಯಾತ್ಮಕ ವಿಶೇಷತೆ ಕಾಯಕ ಸಮರ್ಥ–'ಕ, ಸಾರ್ಥಕ ಎನಿಸಿತು. ಶಾಲಾ ಬಾಲೆಯರಾದ ಸ್ವಾತಿ ಯಲಗುದ್ರಿ, ಪ್ರಿಯಾಂಕಾ ಜಾಯಗೊಂಡ, ಪ್ರತೀಕ್ಷಾ ಜಾಯಗೊಂಡ, ಕವಿತಾ ಲಾಯ್ಯನವರ,ಕಾವೇರಿ ಹಾದಿಮನಿ, ಸಾಕ್ಷಿ ಜಾಧವ ಸೇರಿದಂತೆ ಅನೇಕ ಒಡನಾಡಿ ಸ್ನೇಹಪಾಠಿಗಳು ಟೆಂಗಿನ ಸಸಿ ಗುರುವಿಗೆ ಪೂಜ್ಯತೆಯ ಭಾವದಿಂದ ನೀಡಿ ಗೌರವಿಸಿದರು.

ಈ ವೇಳೆ ಮುಖ್ಯೋಪಾಧ್ಯಾಯ ಬಸವರಾಜ ಜಾಲೋಜಿ, ಮಕ್ಕಳು ಗೈದ ಈ ವಿಶೇಷ ಅಪರೂಪದ ಕಾರ್ಯ ಶ್ಲಾಘನೀಯ. ಯುವಜನತೆಯಲ್ಲಿ ಪರಿಸರ ಪ್ರೇಮ ವ್ಯಾಪಕವಾಗಿ ಜಾಗೃತವಾಗಬೇಕು. ಗಿಡ,ಮರಗಳನ್ನು ನೆಟ್ಟು ಸಂರಕ್ಷಿಸಲು ಮುಂದಾದರೆ ಅವು ನಮ್ಮನ್ನು ರಕ್ಷಣೆ ಮಾಡುತ್ತವೆ. ಶುದ್ಧ ಗಾಳಿ ನೀಡುವ ಮೂಲಕ ಜೀವ ಚೈತನ್ಯ ಕರುಣಿಸುತ್ತವೆ.ಕಾರಣ ಪ್ರತಿಯೊಬ್ಬರಲ್ಲೂ ಇಂದು ಪರಿಸರ ವ್ಯವಸ್ಥೆಯ ಕಾಳಜಿ ಇರಬೇಕಾಗಿರುವುದು ಅತ್ಯಗತ್ಯ ಎಂದರು.

ಶಿಕ್ಷಕರಾದ ಈರಣ್ಣ ದೇಸಾಯಿ, ಸದಾಶಿವ ಸಿದ್ದಾಪುರ, ಲೋಹಿತ ಮಿರ್ಜಿ, ಜಿ.ಆರ್.ಜಾಧವ, ಶಿಕ್ಷಕಿಂ–ಯರಾದ ಕವಿತಾ ಅಂಬಿ, ಸಹನಾ ಹತ್ತಳ್ಳಿ, ಪ್ರಮೀಳಾ ತೇಲಸಂಗ, ಪ್ರಾಥಮಿಕ ಶಾಲೆಯ ಹಣಮಂತ ಗದಿಗೆಪ್ಪಗೋಳ, ದೈಹಿಕ ಶಿಕ್ಷಕ ಕುಮಾರ ವಾಣಿ ಮೊದಲಾದವ–ರಿದ್ದರು.

# ಸರ್ಕಾರಿ ಶಾಲೆ ಜಾಗದ ಅಳತೆ ಹದ್ದುಬಸ್ತಿಗೆ ಆಗ್ರಹಿಸಿ ಗ್ರಾಮಸ್ಥರ ಮನವಿ

**ಉದಯರಶ್ಮಿ ನ್ಯೂಸ್**



ದೇವರಹಿಪ್ಪರಗಿ: ಮಣ್ಣೂರ ಗ್ರಾಮದ ತಾಂಡಾದ ಎಲ್.ಟಿ 1ರಲ್ಲಿನ ಸರ್ಕಾರಿ ಕನ್ನಡ ಗಂಡುಮಕ್ಕಳ ಶಾಲೆಯ ಜಾಗದ ಅಳತೆಯನ್ನು ಹದ್ದುಬಸ್ತು ಮಾಡಿಕೊಡುವಂತೆ ಆಗ್ರಹಿಸಿ ಗ್ರಾಮಸ್ಥರು ತಹಶೀಲ್ದಾರ ಪ್ರಕಾಶ ಸಿಂದಗಿ ಅವರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಪ್ರವಾಸಿಮಂದಿರಕ್ಕೆ ಗುರುವಾರ ಆಗಮಿಸಿದ ಮಣೂರ ತಾಂಡಾದ ಸಾರ್ವಜನಿಕರು ತಹಶೀಲ್ದಾರರನ್ನು ಕಂಡು ಮಾತನಾಡಿ, ಶಾಲೆಗೆ ಕಂಪೌಂಡ್ ನಿರ್ಮಿಸಲು ಗ್ರಾಮ ಪಂಚಾಯಿತಿಯಿಂದ ಎನ್.ಆರ್.ಇ.ಜಿಯಡಿ ಸುಮಾರು 6 ಲಕ್ಷ.ರೂಗಳ ಕ್ರೀಯಾಯೋಜನೆ ಸಿದ್ಧಪಡಿಸಲಗಿದೆ. ಶಾಲೆಯ ಜಾಗೆಯ ಆಸ್ತಿ ನಂ 974 ಇದ್ದು, ಚಕಬಂದಿ ಪ್ರಕಾರ 125 ಅಡಿ ಉದ್ದ, 125 ಅಡಿ ಅಗಲ ಅಳತೆ ಹೊಂದಿದೆ. ಈಗ ಇದನ್ನು ಸಾರ್ವಜನಿಕರು ಅತೀಕ್ರಮಣ ಮಾಡದಂತೆ ತಡೆಯಲು ಸುತ್ತಲೂ ತಡೆಗೋಡೆ ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಆದರೆ ಈಗಾಗಲೇ ಸುತ್ತಮುತ್ತಲಿನವರು ತಮ್ಮ ಮನೆಗಳ ಜೊತೆಗೆ ಹೆಚ್ಚುವರಿ ಜಾಗವನ್ನು ಒತ್ತುವರಿ ಮಾಡಿಕೊಂಡು ಈಗ ಕಂಪೌಂಡ್ ನಿರ್ಮಿಸಲು ಅಡಚಣೆ ಉಂಟು ಮಾಡುತ್ತಿದ್ದಾರೆ.

ಅಡಚಣೆ ಕುರಿತು ಗ್ರಾಮ ಪಂಚಾಯಿತಿ ಹಾಗೂ ಎಸ್‌ಡಿಎಮ್‌ಸಿ ಅಧ್ಯಕ್ಷರು, ಶಾಲೆಯ ಮುಖ್ಯಶಿಕ್ಷಕರು ಈಗಾಗಲೇ ಸಾಕಷ್ಟು ತಿಳಿಹೇಳಿದ್ದರು ಅನಗತ್ಯ ತಕರಾರು ಮಾಡುತ್ತಿದ್ದಾರೆ. ಶಾಲೆಯ ಸುಧಾರಣೆಗಾಗಿ ಹಾಗೂ ಶಾಲಾ ಆಸ್ತಿಯನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಶಾಲಾ ಕಂಪೌಂಡ್ ಅಗತ್ಯವಾಗಿದ್ದು ಕೂಡಲೇ ಜಾಗೆಯನ್ನು ಅಳತೆ ಮಾಡಿಕೊಡುವಂತೆ ಆಗ್ರಹಿಸಿ ಮನವಿ ಸಲ್ಲಿಸಿದರು.

ಎಸ್‌ಡಿಎಮ್‌ಸಿ ಅಧ್ಯಕ್ಷ ಷಣ್ಮುಖ ನಾಯಿಕ್, ಉಮೇಶ, ಯುವರಾಜ, ರಾಜು, ವಿನೋದ ಶೆಟ್ಟಿ, ರಾಹುಲ, ಸುನೀಲ, ರಾಜೇಶ ಸೇರಿದಂತೆ ಹಲವರು ಇದ್ದರು.

# ಸಿದ್ಧನಗೌಡ ಹೊಸಮನಿ ಗೆ ಪಿಎಚ್ಡಿ ಪದವಿ

**ಉದಯರಶ್ಮಿ ನ್ಯೂಸ್**



ವಿಜಯಪುರ: ವಿಜಯಪುರದ ಸಿದ್ಧನಗೌಡ ಚಂದ್ರಶೇಖರ ಹೊಸಮನಿ ಅವರು ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ವಿಭಾಗದಲ್ಲಿ ಮಂಡಿಸಿದ 'ಸೈಂಟೋಮೆಟ್ರಿಕ್ ಡೈಮೆನಷನ್ಸ್ ಆಫ್ ಫಾರ್ಮಕಾಲಜಿ □□□ಂಡ್ ಫಾರ್ಮಸಿ ರಿಸರ್ಚ್ ಇನ್ ಇಂಡಿಯಾ : ಒಂದು ಅಧ್ಯಯನ ಎಂಬ ವಿಷಯಾಧಾ–ರಿತ ಮಹಾಪ್ರಬಂಧವನ್ನು ಮನ್ನಿಸಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಪಿಎಚ್‌ಡಿ ಪದವಿ ಘೋಷಿಸಿದೆ.

# ಡೆಂಗ್ಯೂ ಹರಡದಂತೆ ಮುಂಜಾಗ್ರತಾ ಕ್ರಮಕ್ಕೆ ಕೆ.ಆರ್.ಎಸ್. ಪಕ್ಷ ಆಗ್ರಹ

**ಉದಯರಶ್ಮಿ ನ್ಯೂಸ್**





ವಿಜಯಪುರ: ಜಿಲ್ಲೆಯಲ್ಲಿ ಸೊಳ್ಳೆಗಳ ಅಬ್ಬರದಿಂದ ಡೆಂಗ್ಯೂ ನಿಯಂತ್ರಣ ಹಾಗೂ ಶುದ್ಧ ನೀರು ಸರಬರಾಜು ಮಾಡುವಂತೆ ಆಗ್ರಹಿಸಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಇದೇ ಸಂದರ್ಭದಲ್ಲಿ ಕೆ.ಆರ್.ಎಸ್. ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಶಿವಾನಂದ ಯಡಹಳ್ಳಿ ಮಾತನಾಡಿ, ವಿಜಯಪುರ ನಗರ ಮತ್ತು ಜಿಲ್ಲೆಯಲ್ಲಿ ಸೊಳ್ಳೆಗಳ ಅಬ್ಬರ ಹೆಚ್ಚಾಗಿದ್ದು, ಹಾಗೂ ಮಳೆಗಾಲದಲ್ಲಿ ಸೊಳ್ಳೆಗಳ ಸಂಖ್ಯೆ ಹೆಚ್ಚಾಗಿದ್ದು, ರಾಸಾಯನಿಕ ಗೊಬ್ಬರಗಳಿಂದ ದೋಷಿತ ನೀರು ಸರಬರಾಜು ಆಗಿದ್ದು, ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಡೆಂಗ್ಯೂ ಹಾಗೂ ಇತರ ಹಲವಾರು ರೋಗಗಳು ಉಂಟಾಗುತ್ತಿವೆ. ಜಿಲ್ಲೆಯಲ್ಲಿ ಮತ್ತು ವಿಜಯಪುರ ನಗರದಲ್ಲಿ ಸೊಳ್ಳೆಗಳ ಮೇಲೆ ಕೀಟನಾಶಕ ಔಷಧಗಳನ್ನು ಸಿಂಪರಣೆ ಮಾಡುವಂತಾಗಬೇಕು. ಇನ್ನು ನೀರಿನ ಗುಣಮಟ್ಟವನ್ನು ಪರಿಶೀಲಿಸಿ ಸಾರ್ವಜನಿಕರಿಗೆ ಅಗತ್ಯವಾದ ಸೂಚನೆ ಮತ್ತು ಆರೋಗ್ಯಕ್ಕೆ ಬೇಕಾಗುವ ತುರ್ತು ಪರಿಹಾರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಜಿಲ್ಲಾ ಆಡಳಿತ ತುರ್ತು ಸಭೆ ಕರೆದು ಸಂಬಂಧಪಟ್ಟ ಇಲಾಖೆಯ ಅಧಿಕಾ–ರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು. ಹಾಗೂ ಮತ್ತು ಜಿಲ್ಲೆಯಲ್ಲಿ ಏಕಕಾಲದಲ್ಲಿ 40 ಕೀಟನಾಶಕಗಳ ಕೆಟ್ಟಿದ್ದು ಆರೋಗ್ಯ ಇಲಾಖೆ ಅಧಿಕಾರಿಗಳು ನಿರ್ಲಕ್ಷತನ ಮೂಲ ಕಾರಣವಾಗಿದೆ ಇದಕ್ಕೆ ಕಾರಣರಾದ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸು ಜಿಲ್ಲೆಯಲ್ಲಿ ಡೆಂಗ್ಯೂ ಹರಡದಂತೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೆ.ಆರ್.ಎಸ್. ಪಕ್ಷದ ನಗರ ಅಧ್ಯಕ್ಷರಾದ ಅಬ್ದುಲ್ ಹಮೀದ ಎಸ್. ಇನಾಮದಾರ, ವಿಕ್ರಮ ವಾಘಮೋರೆ, ದುರ್ಗಪ್ಪ ಬೂದಿಹಾಳ, ಶಾಂತುಗೌಡ ಬೇಡೆವಾಡ ಇದ್ದರು.

## 'ಉದಯರಶ್ಮಿ' ಪತ್ರಿಕಾ ಬಳಗ

## ಮಣೂರ ಪರಿವಾರ & ಬಂಧು– ಬಳಗದಿಂದ




**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR